ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಡಿಸೆಂಬರ್ 16, 2024

ಸಂಪುಟ : 51 ಸಂಚಿಕೆ : 213 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

# 20 ಲಕ್ಷ ಜನ ಸೇರಿಸಿ ಬಿಎಸ್‌ವೈ ಹುಟ್ಟುಹಬ್ಬ

## ಫೆ.27ರಂದು ದಾವಣಗೆರೆಯಲ್ಲಿ ಅದ್ದೂರಿ ಜನ್ಮದಿನ,ರಾಷ್ಟ್ರೀಯ ನಾಯಕರಿಗೆ ಆಹ್ವಾನ

## ವಿಜಯೇಂದ್ರ ಬಣದ 55ಕ್ಕೂ ಹೆಚ್ಚು ಮಾಜಿ ಸಚಿವರ, ಶಾಸಕರ ಸಭೆಯಲ್ಲಿ ನಿರ್ಣಯ



ದಾವಣಗೆರೆ, ಡಿ.15- ಬರುವ ಫೆಬ್ರವರಿ 27 ರಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಜನ್ಮ ದಿನವನ್ನು ವಿಜೃಂಭಣೆಯಿಂದ ಆಚರಿಸಲು ಬಿಜೆಪಿಯ ಹಿರಿಯ ಮುಖಂಡರು ನಗರದ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ನಡೆದ ಸಭೆಯಲ್ಲಿ ನಿರ್ಣಯ ಕೈಗೊಂಡಿದ್ದಾರೆ.

ಮಾಜಿ ಸಚಿವರುಗಳಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ಕಟ್ಟಾ ಸುಬ್ರಹ್ಮಣ್ಯನಾಯ್ಡು ನೇತೃತ್ವದಲ್ಲಿ ನಡೆದ 55ಕ್ಕೂ ಹೆಚ್ಚು ಮಾಜಿ ಶಾಸಕರು, ಸಚಿವರು ಭಾಗವಹಿಸಿದ್ದ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ.

ಸಭೆಯ ಬಳಿಕ ಪತ್ರಕರ್ತರಿಗೆ ಈ ಕುರಿತು ಮಾತನಾಡಿದ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಯಡಿಯೂರಪ್ಪ ಅವರ ಜನ್ಮ ದಿನಾಚರಣೆಯನ್ನು ದಾವಣಗೆರೆಯಲ್ಲಿ ಆಚರಿಸಲು ನಿರ್ಧರಿಸಲಾಗಿದೆ. ಸುಮಾರು 20 ಲಕ್ಷ ಜನರು ಈ ಸಂದರ್ಭದಲ್ಲಿ ಸೇರಲಿದ್ದಾರೆ ಎಂದು ತಿಳಿಸಿದರು.

ಯಡಿಯೂರಪ್ಪ ಅಭಿಮಾನಿಗಳ ಬಳಗವನ್ನು ರಚಿಸಿಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡಿ, ಅದ್ದೂರಿ ಸಮಾರಂಭ ಆಯೋಜಿಸಿ, ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಬಿಜೆಪಿ ಹಿರಿಯ ನಾಯಕರು, ನಾಡಿನ (4ನೇ ಪುಟಕ್ಕೆ)

## ಬಣವೂ ಅಲ್ಲ, ಪರ್ಯಾಯವೂ ಅಲ್ಲ: ರೇಣುಕಾಚಾರ್ಯ

ಯಾರ ಪರ ಅಥವಾ ಯಾವ ಬಣದ ವಿರುದ್ಧವೂ ಪರ್ಯಾಯ ಸಭೆ ನಡೆಸುತ್ತಿಲ್ಲ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಕಾರ್ಯಕರ್ತರು, ಮುಖಂಡರು, ಪ್ರಜ್ಞಾವಂತರ ಅಪೇಕ್ಷೆ ಮೇರೆಗೆ ಯಡಿಯೂರಪ್ಪರ ಜನುಮ ದಿನಾಚರಣೆಗೆ ನಿರ್ಧರಿಸಿದ್ದೇವೆ. ಇದು ಪರ್ಯಾಯ ಸಭೆ ಅಲ್ಲ, ಬಿಜೆಪಿ ನಾಯಕರ ವಿರುದ್ಧದ ಸಮಾವೇಶವೂ ಅಲ್ಲ. ನಾವು ಯಾರ ವಿರುದ್ಧವೂ ಮಾತನಾಡಿಲ್ಲ. ಮಾತನಾಡುವುದೂ ಇಲ್ಲ ಎಂದು ಹೇಳಿದರು.

ಪಕ್ಷ ಸಂಘಟನೆ ಮಾಡುವ ದೃಷ್ಟಿಯಿಂದ ನಾವೆಲ್ಲರೂ ಒಂದೆಡೆ ಸೇರಿ ಚರ್ಚೆ ಮಾಡಿದ್ದೇವೆ. ಸುಮಾರು 60ಕ್ಕೂ ಹೆಚ್ಚು ಜನ ಮಾಜಿ ಸಚಿವರು, ಮಾಜಿ ಶಾಸಕರು ದಾವಣಗೆರೆಯಲ್ಲಿ ಸಭೆ ಸೇರಬೇಕೆಂದು ಎರಡು ತಿಂಗಳ ಹಿಂದೆ ಬೆಂಗಳೂರಿನಲ್ಲಿ ನಡೆದಿದ್ದ ಸಭೆಯಲ್ಲಿ ನಿರ್ಧರಿಸಿದ್ದೆವು. ಡಿ.9 ಮತ್ತು 10ರಂದು ಸಭೆ ನಿಗದಿಯಾಗಿತ್ತು. ಎಸ್.ಎಂ.ಕೃಷ್ಣ ಅವರ ನಿಧನದಿಂದಾಗಿ ಸಭೆ ಮುಂದೂಡಲಾಗಿತ್ತು. ಇಂದು ನಾವು (4ನೇ ಪುಟಕ್ಕೆ)

## ಯತ್ನಾಳ್‌ಗೆ ಮನದಟ್ಟು ಮಾಡಲು ಇಂದು ಸಭೆ - ಸೋಮಶೇಖರ್ ರೆಡ್ಡಿ

ಬಸನಗೌಡ ಪಾಟೀಲ್ ಯತ್ನಾಳ್, ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಯಡಿಯೂರಪ್ಪ ನವರ ವಿರುದ್ಧ ಮಾತನಾಡುತ್ತಿದ್ದಾರೆ. ಪಕ್ಷವನ್ನು ಎಷ್ಟೋ ವರ್ಷಗಳಿಂದ ಕಟ್ಟಿ ಬೆಳೆಸಿದ ನಾಯಕರು ಯಡಿಯೂರಪ್ಪ ನವರು. ಅವರ ವಿರುದ್ಧ ಮಾತನಾಡುತ್ತಿರುವುದು ತಪ್ಪು ಎಂದು ಮನದಟ್ಟು ಮಾಡಿಸೋಕೆ ಸಭೆ ಮಾಡುತ್ತಿದ್ದೇವೆ ಎಂದು ಮಾಜಿ ಶಾಸಕ ಸೋಮಶೇಖರ್ ರೆಡ್ಡಿ ಹೇಳಿದ್ದಾರೆ.

ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನೂರಕ್ಕೆ ನೂರರಷ್ಟು ಈ ಸಭೆಯನ್ನು ಯತ್ನಾಳ್ ವಿರುದ್ದವೇ ನಡೆಸಲಾಗುತ್ತಿದೆ. ಈ ಸಭೆ ಮಾಡಿ ದಿಲ್ಲಿಗೆ ಹೋಗುವ ವಿಚಾರ ಇದೆ ಎಂದವರು ಹೇಳಿದರು.

## ಹಾರ್ದಿಕ ಅಭಿನಂದನೆಗಳು

ದಾವಣಗೆರೆಯ ಹೆಮ್ಮೆಯ ಸುಪುತ್ರಿ ಅನ್ವಿತ.G.S 5ನೇ ತರಗತಿ SSNPS ಶಾಲೆಯವರು ಥೈಲ್ಯಾಂಡ್ ನಲ್ಲಿ ನಡೆದ ಪ್ರತಿಷ್ಠಿತ "International yogasana Championship" 2024 ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದ ಮೂರನೇ ಪ್ರಶಸ್ತಿಗೆ ಪಾತ್ರರಾಗಿದ್ದಾರೆ





ಇವರ ಶ್ರೇಷ್ಠ ಸಾಧನೆಗೆ ಮತ್ತು ಮುಂದಿನ ಉತ್ತಮ ಭವಿಷ್ಯಕ್ಕೆ ಶುಭಕೋರುವವರು

"ತಂದೆ ತಾಯಿ"

ಡಾ|| ನಂದಿನಿ ಡಾ|| ಸುನಿಲ್ ಕುಮಾರ್, ವೈದ್ಯರು, ನಂದಿನಿ ಆಸ್ಪತ್ರೆ

"ತಾತಂದಿರು ಅಜ್ಜಿಯಂದಿರು"

ಶ್ರೀಮತಿ ವನಜಾಕ್ಷಿ ಶ್ರೀ ಶಿವಕುಮಾರ್ ಡಿ.ಜಿ ದ್ಯಾಮೇನಳ್ಳಿ
ಶ್ರೀಮತಿ ರತ್ನಮ್ಮ ಶ್ರೀ ಮಲ್ಲಿಕಾರ್ಜುನಪ್ಪ (ಮಾಜಿ DHUDA ಅಧ್ಯಕ್ಷರು ಬಳ್ಳೆಕಟ್ಟೆ)
ಇವರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ಕುಟುಂಬದವರು

ದ್ಯಾಮೆನಳ್ಳಿ, ಕುಟುಂಬದ ವಂಶಸ್ಥರು ಹಾಗೂ ಹಿತೈಷಿಗಳು

ಬಳ್ಳೆಕಟ್ಟೆ ಕುಟುಂಬದ ವಂಶಸ್ಥರು ಮತ್ತು ಹಿತೈಷಿಗಳು

ಡಾ|| ನಂದಿನಿ ಮತ್ತು ಡಾ|| ಸುನಿಲ್ ಅವರ ಸ್ನೇಹಿತರು ಮತ್ತು
ನಂದಿನಿ ಆಸ್ಪತ್ರೆ ಸಿಬ್ಬಂದಿ ವರ್ಗ



# ಹರಪನಹಳ್ಳಿ : ಸಂಭ್ರಮದಿಂದ ಜರುಗಿದ ಶ್ರೀ ಲಕ್ಷ್ಮಿ ವೆಂಕಟೇಶ್ವರ ರಥೋತ್ಸವ



ಹರಪನಹಳ್ಳಿ, ಡಿ. 15 - ಪಟ್ಟಣದ ಹೊರವಲಯದಲ್ಲಿರುವ ಲಕ್ಷ್ಮಿ ವೆಂಕಟೇಶ್ವರ ರಥೋತ್ಸವ ನೆರೆದಿದ್ದ ಅಪಾರ ಭಕ್ತರ ಸಮ್ಮುಖದಲ್ಲಿ ಭಾನುವಾರ ಸಂಜೆ ಸಡಗರ, ಸಂಭ್ರಮದಿಂದ ಜರುಗಿತು.

ಬೆಳಗಿನ ಜಾವ ದೇವಸ್ಥಾನದಲ್ಲಿ ಅರ್ಚಕರು ಪೂಜಾ ಕೈಂಕರ್ಯ ನೇರವೇರಿಸುತ್ತಿದ್ದಂತೆ ಸರತಿ ಸಾಲಿನಲ್ಲಿ ಸಾಗಿ ಭಕ್ತರು ಸ್ವಾಮಿಯ ದರ್ಶನ ಪಡೆದರು. ಸಂಜೆ ವೇಳೆಗೆ ಸ್ವಾಮಿಯನ್ನು ಸಕಲ ಬಿರುದಾವಳಿಗಳೊಂದಿಗೆ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿದ ನಂತರ, ದೇವಸ್ಥಾನದಿಂದ ಮಂಗಳ ವಾದ್ಯ ಮೇಳಗಳೊಂದಿಗೆ ಪಲ್ಲಕ್ಕಿ ಉತ್ಸವ ಹೊರಟಿತು.

ರಥವನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕಿ ಅರ್ಚಕ ಬಳಗವು ಸ್ವಾಮಿಯ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸುತ್ತಿದ್ದಂತೆ ಭಕ್ತರು ಗೋವಿಂದ, ಗೋವಿಂದ ಲಕ್ಮಿರಮಣ ಗೋವಿಂದ ಎಂದು ಜೈಕಾರ ಕೂಗಿದರು.

ರಥವನ್ನು ಎಳೆಯಲು ಪ್ರಾರಂಭಿಸುತ್ತಿದ್ದಂತೆ ನೆರೆದ ಅಪಾರ ಭಕ್ತರು ತೇರಿನ ಗಾಲಿಗಳಿಗೆ ತೆಂಗಿನಕಾಯಿ ಒಡೆದು, ಬಾಳೆಹಣ್ಣು, ತೂರಿ ಭಕ್ತಿ ಮೆರೆದರು.

ಈ ವೇಳೆ ಶಾಸಕರಾದ ಎಂ.ಪಿ. ಲತಾಮಲ್ಲಿಕಾರ್ಜುನ್‌ರವರಿಗೆ ದೇವಸ್ಥಾನದ ಕಮಿಟಿ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು. ವಕೀಲರಾದ ಸಿ. ಚಂದ್ರಶೇಖರ್ ಭಟ್ಟ್, ತಹಶೀಲ್ದಾರ್ ಗಿರೀಶ್ ಬಾಬು, ಸಿ.ಪಿ.ಐ. ನಾಗರಾಜ ಕಮ್ಮಾರ ಸೇರಿದಂತೆ ಇತರರು ಇದ್ದರು.

ವಾಲ್ಮೀಕಿ ಜಾತ್ರೆ

## ಇಂದಿನಿಂದ ರಾಜನಹಳ್ಳಿ ಶ್ರೀಗಳ ರಾಜ್ಯ ಪ್ರವಾಸ

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಬರುವ ಫೆಬ್ರವರಿ 8 ಮತ್ತು 9 ರಂದು ಜರುಗಲಿರುವ 7ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಇಂದಿನಿಂದ ರಾಜ್ಯದಲ್ಲಿ 2ನೇ ಹಂತದ ಪ್ರವಾಸ ಕೈಗೊಂಡಿದ್ದಾರೆ.



ಇಂದಿನಿಂದ ಡಿಸೆಂಬರ್ 31 ರವರೆಗೆ ಕೈಗೊಂಡಿರುವ 2ನೇ ಹಂತದ ಪ್ರವಾಸದಲ್ಲಿ ಶ್ರೀಗಳು, ಇಂದು ಬೆಳಿಗ್ಗೆ 9 ಗಂಟೆಗೆ ರಾಣೇಬೆನ್ನೂರು, 12 ಗಂಟೆಗೆ ಬ್ಯಾಡಗಿ, ಮಧ್ಯಾಹ್ನ 2ಕ್ಕೆ ಹಾವೇರಿ, ಸಂಜೆ 4 ಕ್ಕೆ ಶಿಗ್ಗಾವಿ, ದಿನಾಂಕ 17ರ ಮಂಗಳವಾರ ಬೆಳಿಗ್ಗೆ 9ಕ್ಕೆ ಸವಣೂರು, ಮಧ್ಯಾಹ್ನ 12ಕ್ಕೆ ಲಕ್ಷ್ಮೇಶ್ವರ, ಮಧ್ಯಾಹ್ನ 2ಕ್ಕೆ ಶಿರಹಟ್ಟಿ, ಸಂಜೆ 4ಕ್ಕೆ ಗದಗ, ದಿನಾಂಕ 18ರ ಬುಧವಾರ ಬೆಳಿಗ್ಗೆ 9ಕ್ಕೆ ರೋಣ, ಮಧ್ಯಾಹ್ನ 1ಕ್ಕೆ ಬಾದಾಮಿ, ಸಂಜೆ 4ಕ್ಕೆ ಗುಳೇದಗುಡ್ಡ ಸೇರಿದಂತೆ ಬಾಗಲಕೋಟೆ, ಬೆಳಗಾವಿ, ಧಾರವಾಡ, ಉತ್ತರ ಕನ್ನಡ, ಹಾವೇರಿ, ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ವಾಲ್ಮೀಕಿ ಜಾತ್ರೆಯ ಪೂರ್ವಭಾವಿ ಸಭೆಗಳನ್ನು ನಡೆಸಲಿದ್ದಾರೆ.

# ಒಳಮೀಸಲಾತಿ ಚರ್ಚೆಯಾದರೆ 2 ಕೈ ಎತ್ತಿ ವಿಷಯ ಮಂಡಿಸುವೆ



ಹೊನ್ನಾಳಿ, ಡಿ. 15- ಬೆಳಗಾವಿ ವಿಧಾನಸಭೆ ಕಲಾಪದ ಸಂದರ್ಭದಲ್ಲಿ ಒಳಮೀಸಲಾತಿ ಜಾರಿಗೊಳಿಸುವ ಬಗ್ಗೆ ಚರ್ಚೆ ಆದಲ್ಲಿ ನನ್ನ ಎರಡೂ ಕೈಎತ್ತಿ ವಿಷಯ ಮಂಡಿಸಿ, ಒಳಮೀಸಲಾತಿಗೆ ಒತ್ತಾಯಿಸುವುದಾಗಿ ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

**ಹೊನ್ನಾಳಿ ತಾಲ್ಲೂಕಿನ ಕಾರ್ಯಕ್ರಮದಲ್ಲಿ ಶಾಸಕ ಡಿ.ಜಿ. ಶಾಂತನಗೌಡ**

ತಾಲ್ಲೂಕಿನ ಗೊಲ್ಲರಹಳ್ಳಿಯ ತಮ್ಮ ನಿವಾಸದ ಎದುರು ಮಾದಿಗ ಹಾಗೂ ಉಪಜಾತಿಗಳ ಸಂಘಟನೆಗಳು ಒಳಮೀಸಲಾತಿ ಜಾರಿಗೊಳಿಸುವ ಬಗ್ಗೆ ಸದನದಲ್ಲಿ ಶಾಸಕರು ಮಾತನಾಡುವಂತೆ ಒತ್ತಾಯಿಸಿ, ತಮಟೆ ಚಳವಳಿ ನಡೆಸುತ್ತಿದ್ದ ಪ್ರತಿಭಟನಾಕಾರರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕುಂದೂರು ಶಾಂತರಾಜ್ ಮಾತನಾಡಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ಒಳಮೀಸಲಾತಿ ಶಿಫಾರಸ್ಸು ಮಾಡಲು ನಿರ್ಧರಿಸಿತ್ತು, ಅಂದು ಪ್ರಧಾನಿ ನರೇಂದ್ರ ಮೋದಿ ಇದನ್ನು ಬೆಂಬಲಿಸಿದ್ದರು. ಈವರೆಗೂ ನೆನೆಗುದಿಗೆ ಬಿದ್ದಿದೆ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ದಿಡಗೂರು ತಮ್ಮಣ್ಣ ಮಾತನಾಡಿ, ಸುಪ್ರೀಂಕೋರ್ಟ್ ಒಳಮೀಸಲಾತಿ ಜಾರಿಗೆ ಆಯಾ ರಾಜ್ಯಕ್ಕೆ ಆದ್ಯತೆ ನೀಡಿ 4 ತಿಂಗಳುಗಳಾಗಿದ್ದು, ಸರ್ಕಾರವು ಆಯೋಗ ರಚಿಸಿ ಕೈ ಚೆಲ್ಲಿದೆ, ಹರಿಯಾಣ, ತೆಲಂಗಾಣ ರಾಜ್ಯಗಳಂತೆ ನಮ್ಮ ರಾಜ್ಯದಲ್ಲಿ ಏಕೆ ಸಾಧ್ಯವಾಗಿಲ್ಲ ಎಂದು ಶಾಸಕರ ಗಮನಕ್ಕೆ ತಂದರು.

ಸೊರಟೂರು ಹನುಮಂತಪ್ಪ ಮಾತನಾಡಿ, ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವಾರದಲ್ಲೇ ಒಳಮೀಸಲಾತಿ ಜಾರಿಗೊಳಿಸುತ್ತೇವೆಂದು ಭರವಸೆ ನೀಡಿತ್ತು. ಶಾಸಕರು ಈ ಬಗ್ಗೆ ಅಧಿವೇಶನದಲ್ಲೇ ಗಮನ ಹರಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಮಾರಿಕೊಪ್ಪ ಮಂಜಪ್ಪ, ಬೇಲಿಮಲ್ಲೂರು ಉಮೇಶ, ನ್ಯಾಮತಿ ಸುರೇಶ್, ಸೊಗಿಲು ಸಂತೋಷ, ಮಂಜು, ನರಸಿಂಹ, ಕುಂದೂರು ಧರ್ಮಪ್ಪ , ಹನುಮಂತ, ಮಂಜುನಾಥ, ರಾಜಪ್ಪ, ಮಾದಪ್ಪ ಇನ್ನಿತರರಿದ್ದರು.

# ಈರುಳ್ಳಿ ಬೆಲೆ ಹೆಚ್ಚುವ ಸಾಧ್ಯತೆ



ಜಗಳೂರು, ಡಿ. 15 - ಪ್ರಾಕೃತಿಕ ವಿಕೋಪದಿಂದ ಈ ವರ್ಷ ಈರುಳ್ಳಿ ಬೆಳೆಯ ಬೆಲೆ ಹೆಚ್ಚುವ ಸಾಧ್ಯತೆಯಿದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಅಭಿಪ್ರಾಯಪಟ್ಟರು.

**ಜಗಳೂರಿನ ಕಾರ್ಯಕ್ರಮದಲ್ಲಿ ತೋಟಗಾರಿಕೆ ವಿಜ್ಞಾನಿ ಬಸವನಗೌಡ ಎಂ.ಜಿ.**

ಜಗಳೂರು ತಾಲ್ಲೂಕು ಕಲ್ಲೇದೇವರಪುರ ಗ್ರಾಮದಲ್ಲಿ ಪರಿಶಿಷ್ಟ ಪಂಗಡ ಉಪಯೋಜನೆಯಡಿ ಹಮ್ಮಿಕೊಂಡ ಈರುಳ್ಳಿ ಬೆಳೆಯ ಕ್ಷೇತ್ರ ಪ್ರಯೋಗ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ವರ್ಷ ಅತೀ ಹೆಚ್ಚು ಮಳೆಯಿಂದ ಈರುಳ್ಳಿ ಬೆಳೆಗಾರರಿಗೆ ಆರ್ಥಿಕ ನಷ್ಟವಾಗಿದೆ. ಹಾಗೆಯೇ ಉತ್ಪಾದನೆಯೂ ಸಹ ಏರಿಳಿತ ಕಂಡಿದ್ದು, ಬೆಲೆಯು ಏರುಮುಖದತ್ತ ಸಾಗಿದೆ. ಇಂತಹ ಸನ್ನಿವೇಶದಲ್ಲಿ ಹಿಂಗಾರಿನಲ್ಲಿ ಬೆಳೆಯಲು ಸೂಕ್ತ ತಳಿಗಳ ಕೊರತೆಯಿದೆ. ಹಾಗಾಗಿ ಈ ವರ್ಷ ಕೇಂದ್ರದಿಂದ ಸೂಕ್ತ ತಳಿಯ ಬಗ್ಗೆ ನಿರ್ಧರಿಸಲು ಈರುಳ್ಳಿಯಲ್ಲಿ ವಿವಿಧ ತಳಿಗಳ ತಂತ್ರಜ್ಞಾನ ತುಲನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ವಿವಿಧ ತಳಿಗಳಾದ ಅರ್ಕಾ ಭೀಮ್, ಭೀಮಾ ರೆಡ್ ಮತ್ತು ಅಗ್ರಿಫೌಂಡ್ ಲೈಟ್ ರೆಡ್ ತಳಿಗಳನ್ನು ಪ್ರಯೋಗದಲ್ಲಿ ಬಳಸುತ್ತಿದ್ದು, ಹಿಂಗಾರಿಗೆ ಸೂಕ್ತ ತಳಿಯನ್ನು ನಿರ್ಧರಿಸಲಾಗುತ್ತದೆ ಎಂದು ತಿಳಿಸಿದರು. ಮಣ್ಣು ಪರೀಕ್ಷೆಯ ಮಹತ್ವ ಮತ್ತು ಪೋಷಕಾಂಶಗಳ ನಿರ್ವಹಣೆಯ ಕುರಿತು ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ ಬಿ.ಓ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ರೈತರಾದ ಕೃಷ್ಣಮೂರ್ತಿ, ಶಶಿಧರ, ಮೇಘನಾಥ್, ಸೂರಯ್ಯ, ದಿವಾಕರ್ ಇತರರು ಹಾಜರಿದ್ದರು.

# ತಬಲಾ ಮಾಂತ್ರಿಕ ಜಾಕೀರ್ ಹುಸೇನ್ ನಿಧನ



ದೆಹಲಿ, ಡಿ.15- ವಿಶ್ವವಿಖ್ಯಾತ ತಬಲಾ ಮಾಂತ್ರಿಕ ಜಾಕೀರ್ ಹುಸೇನ್ (73) ನಿಧನರಾಗಿದ್ದಾರೆ. ಅವರಿಗೆ ಹೃದಯ ಸಂಬಂಧಿ ಸಮಸ್ಯೆ ಕಾಣಿಸಿಕೊಂಡಿದ್ದು, ಹೀಗಾಗಿ ಅಮೆರಿಕದ ಖಾಸಗಿ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿತ್ತು. ಆದರೆ, ಅವರು ಭಾನುವಾರ ತಮ್ಮ ಕೊನೆಯುಸಿರೆಳೆದಿದ್ದಾರೆ.

ಭಾರತ ದೇಶದ ಅತ್ಯಂತ ಪ್ರಸಿದ್ಧ ಶಾಸ್ತ್ರೀಯ ಸಂಗೀತಗಾರರಲ್ಲಿ ಒಬ್ಬರಾಗಿರುವ ಜಾಕಿರ್ ಹುಸೇನ್ ಅವರು, ತಮ್ಮ ವೃತ್ತಿಜೀವನದಲ್ಲಿ ಅವರು ಗ್ರ್ಯಾಮಿ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು.

ಜಾಕೀರ್ ಅವರ 90ರ ದಶಕದಲ್ಲಿ ಚಹಾದ 30 ಸೆಕೆಂಡ್ ಜಾಹೀರಾತಿನಲ್ಲಿ ತಬಲಾ ಮೇಲೆ ಕುಣಿದಾಡುತ್ತಿದ್ದ ಬೆರಳುಗಳು, ಆಗ ಹೊರಹೊಮ್ಮುತ್ತಿದ್ದ ತಬಲಾ ಸದ್ದು ತಲೆದೂಗುವಂತೆ ಮಾಡುತ್ತಿತ್ತು. ಕೊನೆಗೆ, 'ವಾಹ್ ಉಸ್ತಾದ್ ವಾಹ್' ಎಂಬ ಮಾತಿಗೆ 'ವಾಹ್ ತಾಜ್ ಎನ್ನಿ' ಎಂಬ ಮಾತು ಈಗ ಕ್ಷೀಣವಾಗಿ ಕೇಳಿದಂತೆ ಭಾಸವಾಗುತ್ತಿದೆ.

ಜಾಕಿರ್ ಹುಸೇನ್ ನಿಧನಕ್ಕೆ ಪಶ್ಚಿಮ ಬಂಗಾಳದ ಸಿಎಂ ಮಮತಾ ಬ್ಯಾನರ್ಜಿ, ಸಿಎಂ ಸಿದ್ದರಾಮಯ್ಯ ಹೀಗೆ ಹಲವಾರು ಗಣ್ಯರು ಕಂಬನಿ ಮಿಡಿದಿದ್ದಾರೆ.

## ಕ್ರೀಡಾ ಪಟುಗಳಿಗೆ ಪ್ರೋತ್ಸಾಹ ಧನಕ್ಕಾಗಿ ಅರ್ಜಿ

ದಾವಣಗೆರೆ, ಡಿ. 15 - ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಗಿರಿಜನ ಯೋಜನೆಯಡಿಯಲ್ಲಿ 2023ನೇ ಕ್ಯಾಲೆಂಡರ್ ವರ್ಷದಲ್ಲಿ ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಇದೇ ದಿನಾಂಕ 20 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ : 08192-237480ನ್ನು ಸಂಪರ್ಕಿಸಲು ಸಹಾಯಕ ನಿರ್ದೇಶಕ ರೇಣುಕಾದೇವಿ ತಿಳಿಸಿದ್ದಾರೆ.

# ಲಿಂ. ಮರುಳಸಿದ್ಧರ ಪುಣ್ಯಸ್ಮರಣೋತ್ಸವ



ಕೊಟ್ಟೂರು, ಡಿ.15- ತಾಲ್ಲೂಕಿನ ಉಜ್ಜಿನಿ ಗ್ರಾಮದ ಕ್ಷೇತ್ರನಾಥ ಜಗದ್ಗುರು ಮರುಳಸಿದ್ದೇಶ್ವರ ಸ್ವಾಮಿಯ ಲಕ್ಷ ದೀಪೋತ್ಸವ, ಲಿಂ. ಮರುಳಸಿದ್ಧ ಶಿವಾಚಾರ್ಯ ಶ್ರೀಗಳ 13ನೇ ವರ್ಷದ ಪುಣ್ಯ ಸಂಸ್ಮರಣೋತ್ಸವ ಕಾರ್ಯಕ್ರಮದ ಅಂಗವಾಗಿ ಶ್ರೀ ಪೀಠದ ಆವರಣದಲ್ಲಿ ಸಾಮೂಹಿಕ ವಿವಾಹ ನಡೆಯಿತು.

**ಕೊಟ್ಟೂರು**

ದಾಂಪತ್ಯ ಜೀವನಕ್ಕೆ ಕಾಲಿಟ್ಟ ನವಜೋಡಿಗಳು ಕುಟುಂಬದ ಗುರು-ಹಿರಿಯರ ಮಾರ್ಗದರ್ಶನದಲ್ಲಿ ಜೀವನ ಸಾಗಿಸ ಬೇಕು. ಹೆಣ್ಣು ತವರುಮನೆ ಹಾಗೂ ಗಂಡನ ಮನೆಗೆ ಕೀರ್ತಿ ತರುವಂತೆ ನಡೆಯಬೇಕು. ಕುಟುಂಬವನ್ನು ತೊರೆದು ಬಂದ ಹೆಣ್ಣನ್ನು ಪ್ರೀತಿಯಿಂದ ನೋಡಿ ಕೊಂಡಾಗ ಮನೆಯಲ್ಲಿ ಶಾಂತಿ-ನೆಮ್ಮದಿ ಶಾಶ್ವತವಾಗಿ ನೆಲೆಸಲಿದೆ ಎಂದು ಉಜ್ಜಿನಿ ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ಕಲಕೇರಿ ಶ್ರೀಗಳು, ನಾವಡಗಿ ಶ್ರೀಗಳು, ದೇವರ ಹಿಪ್ಪರಗಿ ಶ್ರೀಗಳು, ಕುರವತ್ತಿ ಶ್ರೀಗಳು, ದಿಂಡದಹಳ್ಳಿ ಶ್ರೀಗಳು, ಶಿವಾಚಾರ್ಯರು ಮತ್ತು ಇತರರು ಸಾಮೂಹಿಕ ವಿವಾಹದಲ್ಲಿ ಉಪಸ್ಥಿತರಿದ್ದರು.

## ನಾಳೆ ಆವರಗೊಳ್ಳ ವೀರಭದ್ರೇಶ್ವರ ಸ್ವಾಮಿ ಕಾರ್ತಿಕೋತ್ಸವ



ದಾವಣಗೆರೆ, ಡಿ. 15- ತಾಲ್ಲೂಕಿನ ಆವರಗೊಳ್ಳ ಸುಕ್ಷೇತ್ರದ ಶ್ರೀ ವೀರಭದ್ರೇಶ್ವರ ಸ್ವಾಮಿ ಕಾರ್ತಿಕೋತ್ಸವ ನಾಡಿದ್ದು ದಿನಾಂಕ 17 ರ ಮಂಗಳವಾರ ಜರುಗಲಿದೆ ಎಂದು ಶ್ರೀ ವೀರಭದ್ರೇಶ್ವರ ಸ್ವಾಮಿ ಸೇವಾ ಸಂಘದ ಅಧ್ಯಕ್ಷ ಬಿ.ಎಂ. ಷಣ್ಮುಖಯ್ಯ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಗಿನ ಜಾವ ಶ್ರೀ ವೀರಭದ್ರೇಶ್ವರ ಸ್ವಾಮಿ, ಆದಿದೈವ ಕನ್ನೇಶ್ವರ ಸ್ವಾಮಿ, ಜಗದ್ಗುರು ರೇಣುಕಾಚಾರ್ಯರ ಸಂಜೀವಿನಿ ಗದ್ದುಗೆಗೆ ರುದ್ರಾಭಿಷೇಕ, ಮಹಾಪೂಜೆ ಹಾಗೂ ಗ್ರಾಮದಲ್ಲಿನ ಎಲ್ಲಾ ದೇವರುಗಳಿಗೂ ಪೂಜೆ ನೆರವೇರಲಿದೆ ಎಂದರು.

ಇದಲ್ಲದೆ ಪೂಜೆಯ ನಂತರ ದೊಡ್ಡಬಾತಿ ಗ್ರಾಮದಿಂದ ಆಗಮಿಸುವ ಶ್ರೀ ರೇವಣಸಿದ್ದೇಶ್ವರ ಸ್ವಾಮಿ, ಶ್ರೀ ಬೀರಲಿಂಗೇಶ್ವರ ಸ್ವಾಮಿ ದೇವರುಗಳನ್ನು ಬಾಜಾ ಭಜಂತ್ರಿ, ಡೊಳ್ಳು, ಸಮಾಳದೊಂದಿಗೆ ವೈಭವದಿಂದ ಎದುರುಗೊಂಡು, ದೇವಸ್ಥಾನಕ್ಕೆ ಮೆರವಣಿಗೆ ಮೂಲಕ ಕರೆದೊಯ್ದು ಧಾರ್ಮಿಕ ಕಾರ್ಯಗಳಿಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಇದಾದ ನಂತರ ದೇವಸ್ಥಾನದಲ್ಲಿ ಕದಳಿ ಮಂಟಪದ ಪೂಜೆ ನಡೆದು ನಂತರ ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ರೇವಣಸಿದ್ದೇಶ್ವರ ಸ್ವಾಮಿ, ಶ್ರೀ ಬೀರಲಿಂಗೇಶ್ವರ ಸ್ವಾಮಿ ದೇವರುಗಳ ಪಾಲಿಕೆ ಉತ್ಸವವು ದೇವಸ್ಥಾನದಿಂದ ಆರಂಭಗೊಂಡು ನಂದಿ ಬಸಪ್ಪನ ಕಟ್ಟೆಯವರೆಗೂ ನಡೆಯಲಿದೆ ಎಂದರು.

ಇದಲ್ಲದೇ, ರಸ್ತೆಯ ಇಕ್ಕೆಲಗಳಲ್ಲಿ ಗುತ್ತೂರು ಗೌಡರ ವಂಶಸ್ಥರು ಹಚ್ಚುವ ದೀಪದ ಸಾಲುಗಳ ಮಧ್ಯೆ ಕಳಸ, ಡೊಳ್ಳು, ಸಮಾಳ, ಶಹನಾಯಿ ವಾದ್ಯಮೇಳಗಳೊಂದಿಗೆ ಕಾರ್ತಿಕ ಮಹೋತ್ಸವ ಜರುಗಲಿದೆ.

ಕದಳಿ ಮಂಟಪದ ಪೂಜೆ ನಂತರ ಭಕ್ತರಿಗೆ ಫಳಾರ (ಪ್ರಸಾದ) ಹಂಚಿಕೆ ಮಾಡಲಾಗುವುದು. ದಿನಾಂಕ 18 ರಂದು ಬೆಳಿಗ್ಗೆ ಭಕ್ತರ ಗುಗ್ಗಳ ಸೇವೆಯೊಂದಿಗೆ ಮೆರವಣಿಗೆ ಹೊರಟು, ದೇವಸ್ಥಾನಕ್ಕೆ ಆಗಮಿಸಿ ಕಾರ್ಯಕ್ರಮ ಸಂಪನ್ನಗೊಳ್ಳಲಿದೆ.

ಪತ್ರಿಕಾಗೋಷ್ಠಿಯಲ್ಲಿ ಆವರಗೊಳ್ಳ ಗ್ರಾಮದ ಮುಖಂಡರಾದ ಡಿ. ವೀರಯ್ಯ, ಕೆ. ರಾಜಶೇಖರ್, ಬೆಲ್ಲದ ಚಂದ್ರಪ್ಪ, ವಿ.ಎಸ್. ಸತೀಶ್ ಉಪಸ್ಥಿತರಿದ್ದರು.


**ಹದಿನೈದನೇ ವರ್ಷದ ಪುಣ್ಯಸ್ಮರಣೆ**



ದಿ|| ಶ್ರೀಮತಿ ಪಿ. ಶಶಿಕಲಾ

ಜನನ : 10.9.1957, ಮರಣ : 16.12.2009

ನೀವು ನಮ್ಮನ್ನಗಲಿ ಇಂದಿಗೆ ಹದಿನೈದು ವರ್ಷಗಳಾದರೂ ಸಹ ನಿಮ್ಮ ನೆನಪು ನಮ್ಮಲ್ಲಿ ಸದಾ ಅಚ್ಚ ಹಸಿರಾಗಿದೆ. ನೀವು ಹೇಳಿ ಕೊಟ್ಟ ಆದರ್ಶಗಳು, ನಡೆ-ನುಡಿಗಳು, ನಯ-ವಿನಯಗಳೇ ನಮ್ಮ ಜೀವನದ ದಾರಿ ದೀಪವಾಗಿವೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಸದಾ ಸ್ಮರಿಸುವ.

ಪತಿ : ಪಿ. ಪ್ರಕಾಶ್, ಮಕ್ಕಳಾದ : ರವಿರಾಜ್, ಶೃತಿ ಮತ್ತು ರಾಕೇಶ್

ಸೊಸೆಯಂದಿರು : ಕಾವ್ಯಶ್ರೀ, ವಿಜಯಲಕ್ಷ್ಮಿ ಮೊಮ್ಮಕ್ಕಳು : ಖುಷಿ, ಆರ್ವಿ, ಅನರ್ವ್, ಬಂಧು-ಮಿತ್ರರು.


# ಬಸವ ಜಯ ಮೃತ್ಯುಂಜಯ ಶ್ರೀಗಳ ಮೇಲಿನ ಹಲ್ಲೆ ಖಂಡನೀಯ : ಎಂಪಿಆರ್

ದಾವಣಗೆರೆ, ಡಿ.15- ಬೆಳಗಾವಿಯಲ್ಲಿ ನಡೆದ 2ಎ ಮೀಸಲಾತಿ ಹೋರಾಟದಲ್ಲಿ ಸಮುದಾಯದವರ ಮೇಲೆ ಮಾತ್ರವಲ್ಲದೇ, ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮೇಲೂ ಹಲ್ಲೆ ನಡೆಸಿರುವುದು ಖಂಡನೀಯ ಎಂದು ಸಚಿವ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಟನೆ ವೇಳೆ ಹೋರಾಟಗಾರರ ಮೇಲೆ ಗೋಲಿಬಾರ್ ನಡೆಸುವ ಮೂಲಕ ಕೂಡಲಸಂಗಮ ಪೀಠದ ಶ್ರೀಗಳನ್ನು ಮುಗಿಸಲು ಪೊಲೀಸ್ ಅಧಿಕಾರಿಗಳು ಸಂಚು ರೂಪಿಸಿದ್ದರು ಎಂದು ಗಂಭೀರ ಆರೋಪ ಮಾಡಿದರು.

ಕಿತ್ತೂರು ರಾಣಿ ಚನ್ನಮ್ಮಳ ವಂಶಸ್ಥರ ಮೇಲೆ ಪೊಲೀಸರು ಹಲ್ಲೆ ಮಾಡಿದ್ದಾರೆ. ಇದನ್ನು ಎಲ್ಲ ಸಮುದಾಯಗಳ ಮಠಾಧೀಶರು ಖಂಡಿಸಬೇಕು. ಇಲ್ಲವಾದರೆ ಯಾರಿಗೂ ಉಳಿಗಾಲವಿಲ್ಲದಂತಾಗುತ್ತದೆ ಎಂದು ಹೇಳಿದರು.

ಹೋರಾಟಗಾರರು ಕಲ್ಲು ತೂರಾಟ ಮಾಡಿಲ್ಲ. ಹೋರಾಟದ ದಿಕ್ಕು ತಪ್ಪಿಸಲು ಗೃಹ ಸಚಿವರೇ ಕಲ್ಲು ತೂರಾಟ ನಡೆಸಿರಬಹುದು ಎಂದು ಆರೋಪಿಸಿದರು.

'ಲಾಠಿ ಚಾರ್ಜ್ ಮಾಡುವ ಬದಲು ಮುತ್ತು ಕೊಡಬೇಕಿತ್ತಾ' ಎಂದು ಹಗುರವಾಗಿ ಮಾತನಾಡುವ ಗೃಹ ಸಚಿವ ಜಿ. ಪರಮೇಶ್ವರ್ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದು ಒತ್ತಾಯಿಸಿದರು.

2ಎ ಮೀಸಲಾತಿ ಕೇಳುವುದು ನಮ್ಮ ಹಕ್ಕು. ಆದರೆ ನಮ್ಮ ಹಕ್ಕಿಗಾಗಿ ಹೋರಾಡುವಾಗ ಸರ್ಕಾರ ಮಾನವೀಯತೆ ಮರೆತು ಮೃಗಗಳಂತೆ ವರ್ತಿಸಿರುವುದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯನವರು ಕಾವಿ ಬಟ್ಟೆ ವಿರೋಧಿ ಧೋರಣೆ ತೋರಿದ್ದಾರೆ. ಹಾಗಾಗಿ ಕೂಡಲೇ ಮುಖ್ಯ ಮಂತ್ರಿಗಳು ಶ್ರೀಗಳು ಮತ್ತು ಪಂಚಮಸಾಲಿ ಸಮಾಜಕ್ಕೆ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಬಿಜೆಪಿ ಮುಖಂಡರಾದ ಮಾಡಾಳ್ ಮಲ್ಲಿಕಾರ್ಜುನ್, ಲೋಕಿಕೆರೆ ನಾಗರಾಜ್, ಬಿ.ಜಿ ಅಜಯ್ ಕುಮಾರ್, ಚಂದ್ರಶೇಖರ್ ಪೂಜಾರ್, ಮಾಜಿ ಶಾಸಕ ಅರುಣ್ ಕುಮಾರ್, ದಯಾನಂದ, ಜಯರುದ್ರೇಶ್, ಕಿರಣ ಸುದ್ದಿಗೋಷ್ಠಿಯಲ್ಲಿದ್ದರು.

## ಜನರ ಕಣ್ಮರೆಯಲ್ಲಿ ಹಸೀನಾ ಭಾಗಿ: ಬಾಂಗ್ಲಾ ಆಯೋಗ

ಢಾಕಾ, ಡಿ.15- ಬಾಂಗ್ಲಾದೇಶದ ಪದಚ್ಯುತ ಪ್ರಧಾನಮಂತ್ರಿ ಶೇಕ್ ಹಸೀನಾ ಹಾಗೂ ಸೈನ್ಯದ ಉನ್ನತರು ಮತ್ತು ಪೊಲೀಸರು ಜನರು ಕಣ್ಮರೆಯಾದ ಪ್ರಕರಣಗಳಲ್ಲಿ ಭಾಗಿಯಾಗಿದ್ದರು ಎಂದು ಅಲ್ಲಿನ ಆಯೋಗ ತಿಳಿಸಿದೆ.

ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಐವರು ಸದಸ್ಯರ ತನಿಖಾ ಆಯೋಗ ರಚಿಸಿತ್ತು. ಈ ಆಯೋಗವು ಮುಖ್ಯ ಸಲಹೆಗಾರ ಮೊಹಮ್ಮದ್ ಯೂನಸ್ ಅವರಿಗೆ ಶನಿವಾರ ತನ್ನ ವರದಿಯನ್ನು ಸಲ್ಲಿಸಿದೆ.

ಬಾಂಗ್ಲಾದಲ್ಲಿ ಹಸೀನಾ ಅವಧಿಯಲ್ಲಿ 3,500 ಬಲವಂತದ ಕಣ್ಮರೆಗಳು ನಡೆದಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

## ಹರಿಹರದಲ್ಲಿ ದತ್ತ ಜಯಂತಿ



ಹರಿಹರ, ಡಿ.15- ನಗರದ ಕೋಟಿ ಬಡಾವಣೆಯ ಜಗದ್ಗುರು ಕೂಡಲಿ ಶೃಂಗೇರಿ ಮಹಾ ಸಂಸ್ಥಾನದ ಶ್ರೀ ದತ್ತ ಪಾದುಕಾ ಮಂದಿರದ ಆವರಣದಲ್ಲಿ ಶ್ರೀ ದತ್ತ ಜಯಂತಿ ಆಚರಣೆಯನ್ನು ಆಚರಿಸಲಾಗುತ್ತದೆ ಎಂದು ಉತ್ಸವ ಸಮಿತಿಯ ಗೌರವಾಧ್ಯಕ್ಷ ಡಾ. ನಾರಾಯಣ ಜೋಯಿಸರು ತಿಳಿಸಿದರು. ಇಂದು ಗೋಪಾಲ ಕಾಲ ಸೇವೆ ನೆರವೇರುವುದು.

## ಕೂಲಂಬಿಯಲ್ಲಿ ಇಂದು ರಥೋತ್ಸವ

ಹೊನ್ನಾಳಿ ತಾಲ್ಲೂಕಿನ ಕೂಲಂಬಿ ಗದುಗೇಶ್ವರ ಸ್ವಾಮಿ ರಥೋತ್ಸವವು ಇಂದು ಬೆಳಿಗ್ಗೆ 7 ಕ್ಕೆ ನಡೆಯಲಿದೆ. 11 ಕ್ಕೆ ಸಾಮೂ ಹಿಕ ವಿವಾಹ ಮತ್ತು ಧಾರ್ಮಿಕ ಕಾರ್ಯಕ್ರಮ ನಡೆಯಲಿದ್ದು, ರಾತ್ರಿ 7.30ಕ್ಕೆ ಅಡ್ಡ ಪಲ್ಲಕ್ಕಿ ಉತ್ಸವ, ಕಾರ್ಯಕ್ರಮ ನಡೆಯ ಲಿದೆ ಎಂದು ಸಮಿತಿಯ ಅಧ್ಯಕ್ಷ ಟಿ.ಎಸ್. ಸೋಮಶೇಖರ್ ತಿಳಿಸಿದ್ದಾರೆ.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಕಾರ್ತಿಕ



ದಾವಣಗೆರೆಯ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಕಾರ್ತಿಕ ದೀಪೋತ್ಸವ ಕಾರ್ಯಕ್ರಮವು ಜರುಗಲಿದೆ.

ಇಂದು ಟಿ. ಜಯದೇವಪ್ಪ ಕುಟುಂಬದವರಿಂದ ಕಾರ್ತಿಕ ದೀಪೋತ್ಸವ ಜರುಗಲಿದೆ.

ನಾಳೆ ಸೋಮವಾರ ಬಾವಿಕಟ್ಟೆ ಚಿದಾನಂದಪ್ಪ ಅವರು ಕಾರ್ತಿಕ ದೀಪೋತ್ಸವ ನಡೆಸಿಕೊಡಲಿದ್ದು, ಪ್ರತಿದಿನ ಸಂಜೆ 5.30 ರಿಂದ ನಡೆಯುವ ಈ ದೀಪೋತ್ಸವ ಕಾರ್ಯಕ್ರಮದಲ್ಲಿ ಸರ್ವ ಭಕ್ತರು ಭಾಗವಹಿಸಿ ಶ್ರೀ ಗುರು ಕೊಟ್ಟೂರೇಶ್ವರರ ಕೃಪೆಗೆ ಪಾತ್ರರಾಗಬೇಕಾಗಿ ಕೋರಲಾಗಿದೆ.

ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ನಗರದಲ್ಲಿ ನಾಳೆ ಮಾರಮ್ಮ ದೇವಿ ಕಾರ್ತಿಕ



ದಾವಣಗೆರೆ, ಡಿ.15- ಡಿಸಿಎಂ ಲೇಔಟ್ ಹಿಂಭಾಗದ ಕೊಟ್ಟೂರೇಶ್ವರ ಬಡಾವಣೆಯಲ್ಲಿರುವ ಶ್ರೀ ಮಾಳೆ ಮಾರಮ್ಮ ದೇವಿ ದೇವಸ್ಥಾನದ ಸೇವಾ ಟ್ರಸ್ಟ್ ಇವರಿಂದ ನಾಡಿದ್ದು ದಿನಾಂಕ 17ರ ಮಂಗಳವಾರ ಸಂಜೆ 7 ಗಂಟೆಗೆ ಮಳೆ ಮಾರಮ್ಮ ದೇವಿಯ 19ನೇ ವರ್ಷದ ಕಾರ್ತಿಕ ನಡೆಯಲಿದೆ.

# ಹರಿಹರ : ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಂಸಹಾರ ಇರಲಿ

ಹರಿಹರ, ಡಿ. 15 - ಮಂಡ್ಯದಲ್ಲಿ ಡಿ.20 ರಿಂದ ಆರಂಭವಾಗುವ 87ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಸ್ಯಾಹಾರ ಮತ್ತು ಮಾಂಸಾಹಾರ ಎರಡೂ ಬಗೆಯ ಆಹಾರ ವಿತರಿಸಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಆಗ್ರಹಿಸಿದ್ದಾರೆ.

ಸಾಹಿತ್ಯ ಸಮ್ಮೇಳನದಲ್ಲಿ ಮಾಂಸಹಾರ ನಿಷೇಧಿಸುವುದು ಸಂವಿಧಾನಕ್ಕೆ ವಿರುದ್ಧವಾಗಿದ್ದು, ಆಹಾರದ ಅಸ್ಪೃಶ್ಯತೆ ದೇಶವನ್ನು, ಜನರನ್ನು ಮೇಲು ಕೀಳೆಂದು ವಿಭಜಿಸುತ್ತಿದೆ. ಕೋಮು ದಳ್ಳುರಿಯಲ್ಲಿ ದೇಶ ಬೇಯುವಂತೆ ಮಾಡುತ್ತಿರುವ ದುಷ್ಟ ಶಕ್ತಿಗಳೇ ಆಹಾರ ಶ್ರೇಷ್ಠತೆಯ ವಿಷ ಬೀಜವನ್ನು ಬಿತ್ತುತ್ತಿದ್ದಾರೆಂದು ಅವರು ಆರೋಪಿಸಿದ್ದಾರೆ.

ದೇಶದ ಶೇ. 80ಕ್ಕೂ ಹೆಚ್ಚು ಜನ ಮಾಂಸಾಹಾರಿ ಗಳಾಗಿದ್ದು, ಅವರೆಂದೂ ಸಸ್ಯಹಾರಿಗಳನ್ನು ನಿಕೃಷ್ಟವಾಗಿ ಕಂಡಿಲ್ಲ. ಆದರೆ, ಆಹಾರದಲ್ಲಿ ಭೇದ ವೆಣಿಸುವ ಮೂಲಕ ಸಸ್ಯಹಾರವನ್ನು ವಿಭಜಿಸಿ, ಕೋಮುವಾದ ಮತ್ತಿತರೆ ನೇತಾರರು ಬಹುಸಂಖ್ಯಾತರನ್ನು ಹಣಿಯುವ ಬಡಿಗೆಯನ್ನಾಗಿಸಿ ಪರಿವರ್ತಿಸಿಕೊಂಡಿದ್ದಾರೆ.



ಸಂವಿಧಾನದ ಪ್ರಕಾರ ಆಹಾರ ಹಕ್ಕಿನಲ್ಲಿ ಯಾವುದೇ ತಾರತಮ್ಯ ಮಾಡುವಂತಿಲ್ಲ. ನೆಲದ ಯಾವ ಕಾನೂನುಗಳು ಕೂಡ ಸಸ್ಯಹಾರ ಶ್ರೇಷ್ಠ ಮತ್ತು ಮಾಂಸಹಾರ ಕನಿಷ್ಠ ಎಂದು ಹೇಳಿಲ್ಲ. ಹೀಗಿರುವಾಗ ಬಹುಸಂಖ್ಯಾತರ ಮೇಲೆ ಸಸ್ಯಹಾರದ ಹೇರಿಕೆ ಯಾಕೆ? ಮಾಂಸಹಾರವನ್ನು ಸಮ್ಮೇಳನದಲ್ಲಿ ನಿಷೇಧಿಸಿರುವುದು ಏಕೆ?, ಬಹುಸಂಖ್ಯಾತರ ತೆರಿಗೆ ಹಣವನ್ನು ಪ್ರಭುತ್ವ ಇಂತಹ ಸಮ್ಮೇಳನಗಳನ್ನು ನಡೆಸಲು ವಿನಿಯೋಗಿಸುತ್ತಿಲ್ಲವೇ?, ಹಾಗಿದ್ದ ಮೇಲೆ ಈ ತಾರತಮ್ಯ ಏಕೆಂದು ಅವರು ಪ್ರಶ್ನಿಸಿದ್ದಾರೆ.

ಈ ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ವಿಚಾರದಲ್ಲಿ ಮಧ್ಯೆ ಪ್ರವೇಶಿಸಲಿ. ಸಮ್ಮೇಳನದಲ್ಲಿ ಸಸ್ಯಹಾರ ಮತ್ತು ಮಾಂಸಹಾರ ಇರುವಂತೆ ನೋಡಿಕೊಳ್ಳಲಿ. ಅವರು ತೆಗೆದುಕೊಳ್ಳುವ ದಿಟ್ಟ ನಿರ್ಧಾರ 'ಕೋಮು ಸೌಹಾರ್ದ ಕರ್ನಾಟಕ'ವಾಗಿ ಉಳಿಯಲು ಸಹಾಯ ಮಾಡುತ್ತದೆ.

ಮದ್ರಾಸ್ ಹೈಕೋರ್ಟಿನ ವಿಭಾಗೀಯ ಪೀಠ ತಮಿಳುನಾಡಿನ 'ಪಳನಿ ದೇವಸ್ಥಾನದ ಬೆಟ್ಟದ ಸುತ್ತ' ಮಾಂಸಹಾರ ನಿಷೇಧಿಸಲು ಹಾಕಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಜಾ ಮಾಡಿ ಕೊಟ್ಟಿರುವ ತೀರ್ಪಿನಲ್ಲಿ 'ಮಾಂಸಹಾರ–ಸಸ್ಯಹಾರ ಎಂದು ತಾರತಮ್ಯ ಮಾಡಲು ಈ ದೇಶದಲ್ಲಿನ ಯಾವ ಕಾನೂನುಗಳು ಮತ್ತು ಸಂವಿಧಾನ ಸಮ್ಮತಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿರುವುದನ್ನು ಈ ಸಂದರ್ಭದಲ್ಲಿ ನೆನೆಯಬೇಕಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಾಹಿತ್ಯ ಸಮ್ಮೇಳನದಲ್ಲಿ ಸಸ್ಯಹಾರ ಮತ್ತು ಮಾಂಸಹಾರ ಎರಡೂ ಬಗೆಯ ಆಹಾರವನ್ನು ನೀಡುವ ಮೂಲಕ ಸಂವಿಧಾನದ ಆಶಯವನ್ನು ಎತ್ತಿಹಿಡಿದು ಜಿಲ್ಲಾಡಳಿತ, ಸಮ್ಮೇಳನದ ಸ್ವಾಗತ ಸಮಿತಿ ಮತ್ತು ಸರ್ಕಾರ ಮಾದರಿಯಾಗಬೇಕೆಂದು ಅವರು ಆಗ್ರಹಿಸಿದ್ದಾರೆ.

# ಮಹಾರಾಷ್ಟ್ರ ಮುಖಭಂಗ : ಹಿಂದುತ್ವಕ್ಕೆ ಮರಳಲು ಉದ್ಧವ್ ಶಿವಸೇನೆ ಇಂಗಿತ

ಮುಂಬೈ, ಡಿ.15- ಇತ್ತೀಚೆಗೆ ನಡೆದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮುಖಭಂಗಕ್ಕೆ ಗುರಿಯಾಗಿದ್ದ ಉದ್ದವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ), ಮತ್ತೆ ಹಿಂದುತ್ವಕ್ಕೆ ಮರಳುವ ಸೂಚನೆ ನೀಡಿದೆ.

ಬಾಂಗ್ಲಾದೇಶದಲ್ಲಿ ಶೇಕ್ ಹಸೀನಾ ಸರ್ಕಾರ ಪತನವಾದ ನಂತರ ಹಿಂದೂಗಳ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಕೇಂದ್ರ ಸರ್ಕಾರವನ್ನು ಶಿವಸೇನೆ ತರಾಟೆಗೆ ತೆಗೆದುಕೊಂಡಿತ್ತು. ಈಗ ಮುಂಬೈನ ದಾದರ್ ನಿಲ್ದಾಣದ ಹೊರಗಿನ 80 ವರ್ಷಗಳ ಹಳೆಯ ಹನುಮಂತ ದೇವರ ದೇವಾಲಯ ರಕ್ಷಣೆಗೆ ಶಿವಸೇನೆ ಒತ್ತಾಯಿಸಿದೆ. ದೇವಾಲಯ ಧ್ವಂಸಗೊಳಿಸಲು ರೈಲ್ವೆ ನೋಟಿಸ್ ಕಳಿಸಿತ್ತು.

ಶಿವಸೇನೆ ನಾಯಕ ಆದಿತ್ಯ ಠಾಕ್ರೆ ಅವರು ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದ್ದರು. ಕಳೆದ ಡಿಸೆಂಬರ್ 6ರಂದು ಶಿವಸೇನೆ ಪರಿಷತ್ ಸದಸ್ಯ ಮಿಲಿಂದ್ ನಾರ್ವೇಕರ್ ಅವರು ಬಾಬ್ರಿ ಮಸೀದಿ ಧ್ವಂಸದ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ್ದರು. ಇದು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿತ್ತು.

ಇದರಿಂದ ಅಸಮಾಧಾನಗೊಂಡಿದ್ದ ಮಹಾರಾಷ್ಟ್ರ ಸಮಾಜವಾದಿ ಪಕ್ಷದ ನಾಯಕ ಅಬು ಅಜ್ಮಿ, ಪ್ರತಿಪಕ್ಷಗಳ ಮಹಾ ವಿಕಾಸ್ ಅಗಾಡಿಯಿಂದ ಹೊರ ನಡೆಯುವುದಾಗಿ ಹೇಳಿದ್ದರು.

ಪಕ್ಷದ ಹಿರಿಯ ನಾಯಕರ ಒಪ್ಪಿಗೆ ಇಲ್ಲದೆ ನಾರ್ವೇಕರ್ ಬಾಬ್ರಿ ಮಸೀದಿ ಧ್ವಂಸದ ಪರವಾದ ಹೇಳಿಕೆ ನೀಡಲು ಸಾಧ್ಯವಿಲ್ಲ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ. 2019ರಲ್ಲಿ ಶಿವಸೇನೆಯು ತನ್ನ ದೀರ್ಘಕಾಲದ ಮಿತ್ರ ಪಕ್ಷವಾದ ಬಿಜೆಪಿಯಿಂದ ದೂರವಾಗಿತ್ತು. ನಂತರ ಪಕ್ಷ ಕಾಂಗ್ರೆಸ್ ಹಾಗೂ ಎನ್‌ಸಿಪಿ ಜೊತೆ ಕೈ ಜೋಡಿಸಿತ್ತು. ಆದರೆ ವಿಧಾನಸಭಾ ಚುನಾವಣೆಯಲ್ಲಿ ಈ ಮೈತ್ರಿಕೂಟಕ್ಕೆ ತೀವ್ರ ಹಿನ್ನಡೆಯಾಗಿದೆ.

ಶೀಘ್ರದಲ್ಲೇ ಮುಂಬೈ ಸೇರಿದಂತೆ, ಪ್ರಮುಖ ನಗರ ಸಂಸ್ಥೆಗಳಿಗೆ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಉದ್ಧವ್ ಹಿಂದುತ್ವದ ಅಜೆಂಡಾ ಬಯಸಿದ್ದಾರೆ ಎಂದು ರಾಜಕೀಯ ವಲಯದಲ್ಲಿ ಹೇಳಲಾಗುತ್ತಿದೆ.



1997ರಿಂದ 2022 ರ ವರೆಗೆ ಬೃಹನ್ ಮುಂಬೈ ನಗರ ಪಾಲಿಕೆ ಶಿವಸೇನೆ ಹಿಡಿತದಲ್ಲಿತ್ತು. 2017ರಲ್ಲಿ ಶಿವಸೇನೆ 84 ಹಾಗೂ ಬಿಜೆಪಿ 82 ಸ್ಥಾನ ಪಡೆದಿದ್ದವು.

2024ರ ಲೋಕಸಭಾ ಚುನಾವಣೆಯಲ್ಲಿ ಮುಂಬೈನ 6 ಲೋಕಸಭಾ ಸ್ಥಾನಗಳ ಪೈಕಿ ನಾಲ್ಕರಲ್ಲಿ ಶಿವಸೇನೆ ಗೆದ್ದಿತ್ತು. ಆದರೆ ತನ್ನ ಸಾಂಪ್ರದಾಯಿಕ ಭದ್ರಕೋಟೆಗಳಲ್ಲಿ ನಿರೀಕ್ಷೆಯಷ್ಟು ಮತಗಳಿಸಲು ಸಾಧ್ಯವಾಗಿರಲಿಲ್ಲ. ವಿಧಾನಸಭಾ ಚುನಾವಣೆಯಲ್ಲಿ ವೊರ್ಲಿ ಕ್ಷೇತ್ರದಲ್ಲಿ ಆದಿತ್ಯ ಠಾಕ್ರೆ 7,000ಕ್ಕೂ ಕಡಿಮೆ ಮತಗಳ ಅಂತರದಿಂದ ಗೆದ್ದಿದ್ದರು.

ಏಕರೂಪ ನಾಗರಿಕ ಸಂಹಿತೆ ಹಾಗೂ ವಕ್ಫ್ ಮಂಡಳಿ ತಿದ್ದುಪಡಿ ಮಸೂದೆಗಳ ಬಗ್ಗೆ ಉದ್ಧವ್ ನೇತೃತ್ವದ ಶಿವಸೇನೆ ದ್ವಂದ್ವ ನಿಲುವು ತಳೆದಿತ್ತು. ಇದು ಬಿಜೆಪಿಗೆ ಲಾಭ ಮಾಡಿಕೊಟ್ಟಿತ್ತು.

ಇತ್ತೀಚಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮುಂಬೈನ 24 ಕ್ಷೇತ್ರಗಳ ಪೈಕಿ ಶಿವಸೇನೆ ಕೇವಲ ಹತ್ತರಲ್ಲಿ ಜಯ ಗಳಿಸಿತ್ತು. ಇದು ಪಕ್ಷದ ಮತ ಬ್ಯಾಂಕ್ ಕರಗುತ್ತಿರುವ ಸೂಚನೆ ಎಂದು ಹೇಳಲಾಗಿತ್ತು. ಉದ್ಧವ್ ಶಿವಸೇನೆ ಅಭ್ಯರ್ಥಿಗಳು ಗೆದ್ದ ಕ್ಷೇತ್ರಗಳಲ್ಲೂ ಸಹ ಗೆಲುವಿನ ಅಂತರ ಕಡಿಮೆಯಾಗಿತ್ತು.

ಶಿವಸೇನೆ (ಯುಬಿಟಿ) ಎಂದೂ ಹಿಂದುತ್ವ ಕೈ ಬಿಟ್ಟಿಲ್ಲ. ನಮ್ಮ ಹಿಂದುತ್ವ ಭಿನ್ನವಾಗಿದೆ. ನಾವು ಅಲ್ಪಸಂಖ್ಯಾತರನ್ನು ದ್ವೇಷಿಸುವುದಿಲ್ಲ ಎಂದು ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಅಂಬಾದಾಸ್ ದಾನ್ವೆ ಹೇಳಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಹಿಂದೂಗಳು ಒಂದಾಗಬೇಕು ಎಂದು ಪ್ರಚಾರ ನಡೆಸಿತ್ತು. ಅಂತಹ ಪ್ರಚಾರ ಎದುರಿಸುವಲ್ಲಿ ಪಕ್ಷ ಹಿಂದೆ ಬಿದ್ದಿತ್ತು ಎಂದು ಶಿವಸೇನೆ (ಯುಬಿಟಿ) ನಾಯಕರೊಬ್ಬರು ಹೇಳಿದ್ದಾರೆ.

ಮುಂಬೈ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಸೆಕ್ಯುಲರ್ ನಿಲುವು ಫಲ ನೀಡದು ಎಂಬುದು ಶಿವಸೇನೆ (ಯುಬಿಟಿ)ಗೆ ಅರ್ಥವಾಗಿದೆ. ಹೀಗಾಗಿ ಪಕ್ಷ ಮೂಲ ಹಿಂದುತ್ವಕ್ಕೆ ಮರಳುತ್ತಿದೆ ಎಂದು ರಾಜಕೀಯ ವಿಶ್ಲೇಷಕ ಅಭಯ್ ದೇಶಪಾಂಡೆ ಹೇಳಿದ್ದಾರೆ.

2019ರಲ್ಲಿ ಉದ್ಧವ್ ಠಾಕ್ರೆ ಅವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಮಾತನಾಡುವಾಗ, ತಮ್ಮ ಪಕ್ಷ ರಾಜಕೀಯದಲ್ಲಿ ಧರ್ಮ ಬೆರೆಸಿ ತಪ್ಪು ಮಾಡಿತ್ತು ಎಂದಿದ್ದರು. ಈಗ ಅವರು ಮತ್ತೆ ಹಿಂದುತ್ವಕ್ಕೆ ಮರಳುತ್ತಿದ್ದಾರೆ. ಇದು ಅವರ ಪಕ್ಷಕ್ಕೆ ಯಾವುದೇ ಸಿದ್ಧಾಂತ ಇಲ್ಲ ಎಂಬುದನ್ನು ತೋರಿಸುತ್ತದೆ ಎಂದು ಇನ್ನೋರ್ವ ರಾಜಕೀಯ ವಿಶ್ಲೇಷಕ ಪ್ರಕಾಶ್ ಅಕೋಲ್ಕರ್ ಹೇಳಿದ್ದಾರೆ.

# ಸ್ವದೇಶಿ ವಸ್ತುಗಳ ಮೇಲೆ ಅಭಿಮಾನ ಬೆಳೆಸಿಕೊಳ್ಳಿ



## ಸಾಂಸ್ಕೃತಿಕ ಸಂಗೀತ 'ಜುಗಲ್ ಬಂದಿ'ಯಲ್ಲಿ ಜಿ.ಬಿ. ವಿನಯ್

ದಾವಣಗೆರೆ, ಡಿ.15- ಪ್ರತಿಯೊಬ್ಬರೂ ಸ್ವದೇಶಿ ವಸ್ತುಗಳ ಮೇಲೆ ಹೆಚ್ಚಿನ ಅಭಿಮಾನ ಬೆಳೆಸಿಕೊಳ್ಳಬೇಕು ಎಂದು ಇನ್‌ಸೈಟ್ಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ತಿಳಿಸಿದರು.

ಜಾಗರಣ ಮಂಚ್ ಕರ್ನಾಟಕ ಮತ್ತು ಸಂಸ್ಕಾರ ಭಾರತಿ ಸಹಯೋಗದಲ್ಲಿ ನಗರದ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಿರುವ 'ಸ್ವದೇಶ ಮೇಳದಲ್ಲಿ' ಸಾಂಸ್ಕೃತಿಕ ಸಂಗೀತ 'ಜುಗಲ್ ಬಂದಿ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದಾವಣಗೆರೆಯಲ್ಲಿ ಸ್ವದೇಶಿಯ ಬಗ್ಗೆ ಜಾಗೃತಿ ಮಾಡುವ ನಿಟ್ಟಿನಲ್ಲಿ ಸ್ವದೇಶಿ ಮೇಳ ನಡೆಯುತ್ತಿದ್ದು, ಇಲ್ಲಿ ಹಾಕಲಾಗಿರುವ ಸ್ಟಾಲ್‌ಗಳು ಮಾರಾಟ ಮಾಡಿ ಹಣ ಸಂಪಾದಿಸಲು ಬಂದಿಲ್ಲ. ಬದಲಾಗಿ ದೇಶದ ಮೇಲಿನ ಅಭಿಮಾನ ಹೆಚ್ಚಿಸಲು ಮತ್ತು ಜಾಗೃತಿ ಮೂಡಿಸಲು ಬಂದಿವೆ. ಆದ್ದರಿಂದ ಸಾರ್ವಜನಿಕರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪಾಲಿಕೆ ಮಾಜಿ ಮೇಯರ್ ಎಸ್.ಟಿ ವೀರೇಶ್, ಸಿದ್ಧಗಂಗಾ ಸಂಸ್ಥೆಯ ರೇಖಾರಾಣಿ, ಭಾರತೀಯ ಯೋಗ ಒಕ್ಕೂಟದ ವಾಸುದೇವ ರಾಯ್ಕರ್ ಸೇರಿದಂತೆ ಇತರರು ಇದ್ದರು.

## ಕೊಡದಗುಡ್ಡದಲ್ಲಿ ನಾಳೆ ಕಾರ್ತಿಕೋತ್ಸವ

ಜಗಳೂರು ತಾಲ್ಲೂಕಿನ ಕೊಡದಗುಡ್ಡದ ಶ್ರೀ ವೀರಭದ್ರ ಸ್ವಾಮಿ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 17ರ ಮಂಗಳವಾರ ನಡೆಯಲಿದೆ. ನಾಳೆ ಮಂಗಳವಾರ ಬಸವನ ಪೂಜೆ, ರಾತ್ರಿ 7.30 ರಿಂದ 11ರವರೆಗೆ ಬೆಳ್ಳಿ ಪಲ್ಲಕ್ಕಿ ಮಹೋತ್ಸವ ನಡೆಯಲಿದೆ.

# ಅಸ್ಪೃಶ್ಯತೆಯ ನೋವುಂಡವರಿಗೆ ಒಳ ಮೀಸಲಾತಿ ಜಾರಿಗೊಳಿಸಲಿ

## ಮಾದಿಗ-ಛಲವಾದಿ ಸಮಾಜದ ಸಮಾವೇಶದಲ್ಲಿ ಚಿತ್ರದುರ್ಗದ ಬಸವಮೂರ್ತಿ ಮಾದಾರ ಚನ್ನಯ್ಯ ಶ್ರೀ

ದಾವಣಗೆರೆ, ಡಿ.15- ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮರ್ಥರು, ನಿರ್ಗತಿಕರು ಹಾಗೂ ಅಸ್ಪೃಶ್ಯತೆಯಿಂದ ನೋವುಂಡವರಿಗೆ ನ್ಯಾಯ ಒದಗಿಸಲು ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸಬೇಕೆಂದು ಚಿತ್ರದುರ್ಗ ಮಾದಾರ ಚನ್ನಯ್ಯ ಗುರು ಪೀಠದ ಶ್ರೀ ಬಸವ ಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಒತ್ತಾಯಿಸಿದರು.

ಇಲ್ಲಿನ ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟಿನಿಂದ ನಗರದ ಪಾಲಿಕೆ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗುರು ರಾಮದಾಸರ 66ನೇ ಹಾಗೂ ಕೊಂಡಯ್ಯ ಸ್ವಾಮಿಗಳ 18ನೇ ಪುಣ್ಯಾರಾಧನೆ, 33ನೇ ವರ್ಷದ ಸಾಮೂಹಿಕ ಕಲ್ಯಾಣ ಮಹೋತ್ಸವ ಮತ್ತು ಜಿಲ್ಲಾ ಮಾದಿಗ-ಛಲವಾದಿ ಸಮಾಜದ ಸಮಾವೇಶದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಮಾಜದ ಮುಖ್ಯವಾಹಿನಿಗೆ ಬಂದವರು ಈ ಬಗ್ಗೆ ಚರ್ಚಿಸಿ-ಗೊಂದಲ ಮಾಡದೇ, ಜಾತಿ ವ್ಯವಸ್ಥೆಯಿಂದ ಬಳಲಿದ ಸಮುದಾಯಗಳು ಸಮಾಜದಲ್ಲಿ ಹೇಗೆ ಮುಂದೆ ಬರಬೇಕು ಎಂಬುದರ ಬಗ್ಗೆ ಮುಂದುವರೆದ ಎಲ್ಲಾ ಮಠಾಧೀಶರು ಮತ್ತು ಪ್ರಜ್ಞಾವಂತರು ಚಿಂತಿಸಬೇಕಿದೆ ಎಂದರು.

ಇಲ್ಲಿ ಒಬ್ಬರ ಹಕ್ಕನ್ನು ಮತ್ತೊಬ್ಬರು ಕಸಿದುಕೊಳ್ಳುವಂತದ್ದಿಲ್ಲ. ಯಾವ ಸಮುದಾಯಕ್ಕೆ, ಯಾವ ಸಂದರ್ಭದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಮೀಸಲಾತಿ ನಿಗದಿ ಆಗಿರುತ್ತದೋ, ಅಷ್ಟು ಮೀಸಲಾತಿಯನ್ನು ಆ ಸಮುದಾಯಗಳಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಶ್ರೀಗಳು ಆಗ್ರಹಿಸಿದರು.

ಈ ಸಾಮೂಹಿಕ ವಿವಾಹದಲ್ಲಿ ಮದುವೆ ಆಗುತ್ತಿರುವವರು ಯಾರೂ ಆರ್ಥಿಕವಾಗಿ ಶಕ್ತರಾಗಿಲ್ಲ. ಇಂತಹ ನೂರಾರು ಕುಟುಂಬಗಳು ಆರ್ಥಿಕವಾಗಿ ಪ್ರಬಲರಾಗಿ ಸಮಾಜದ ಮುನ್ನೆಲೆಗೆ ಬರಲು ಒಳ ಮೀಸಲಾತಿಯ ಅವಶ್ಯವಿದೆ ಎಂದರು.



**30 ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ನಮ್ಮ ಕೈಲಿ ಉಪವಾಸ ಸತ್ಯಾಗ್ರಹ ಆಗಲ್ಲ. ಸರ್ಕಾರದಲ್ಲಿ ಪರ-ವಿರೋಧ ಚರ್ಚೆಗಳಿವೆ. ಅವೆಲ್ಲವನ್ನು ತೀರ್ಮಾನಿಸಿಕೊಂಡು ತದನಂತರ ಹೋರಾಟದ ಬಗ್ಗೆ ಚಿಂತಿಸೋಣ.**
**- ಬಸವ ಮೂರ್ತಿ ಮಾದಾರ ಚನ್ನಯ್ಯ ಶ್ರೀ**

**ಸರ್ಕಾರ ಕೂಡಲೇ ಒಳ ಮೀಸಲಾತಿ ಜಾರಿಗೊಳಿಸಬೇಕು. ಇಲ್ಲದಿದ್ದರೆ ಬಸವಮೂರ್ತಿ ಮಾದಾರ ಚನ್ನಯ್ಯ ಶ್ರೀಗಳ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತೇವೆ.**
**- ಬಿ.ಹೆಚ್. ವೀರಭದ್ರಪ್ಪ**

ಮಾಜಿ ಸಚಿವ ಆಲ್ಕೋಡ್ ಹನುಮಂತಪ್ಪ ಮಾತನಾಡಿ, ಸಮಪಾಲು, ಸಮಬಾಳು ಎಂಬುದಕ್ಕೆ ಅರ್ಥವೇ ಇಲ್ಲದಂತಾಗಿದೆ. ಚಿತ್ರದುರ್ಗದ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದ ಬಳಿಕ ಒಳ ಮೀಸಲಾತಿ ಜಾರಿ ಮಾಡುತ್ತೇನೆ ಎಂಬ ಭರವಸೆ ಹುಸಿಯಾಗಿದೆ ಎಂದು ಹೇಳಿದರು.

ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ಶ್ರೀಗಳ ಮೇಲೂ ಹಲ್ಲೆ ಮಾಡಿರುವುದು ಖಂಡನೀಯ. ದೇಶದಲ್ಲೇ ಈ ಘಟನೆ ಇದೆ ಮೊದಲು ಎಂದ ಅವರು, ಕೂಡಲೇ ಒಳ ಮೀಸಲಾತಿ ಜಾರಿ ಮಾಡಬೇಕು. ಇಲ್ಲದಿದ್ದರೆ ನಿಮ್ಮ ಅಧಿಕಾರ ಬಹಳ ದಿನ ಇರುವುದಿಲ್ಲ ಎಂದು ಎಚ್ಚರಿಸಿದರು.

ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ದಾಂಪತ್ಯದಲ್ಲಿ ಸಿರಿ-ಸಂಪತ್ತೆ ಮುಖ್ಯವಲ್ಲ, ದಂಪತಿಗಳ ಮನಸ್ಸು ಒಂದಾಗಿರಬೇಕು ಮತ್ತು ಸತಿ-ಪತಿಗಳಲ್ಲಿ ಪ್ರೀತಿ ಇರಬೇಕು. ಯಾವುದೇ ಕಷ್ಟ-ತೊಂದರೆ ಬಂದರೂ ಅದನ್ನು ತಾಳ್ಮೆಯಿಂದ ನಿಭಾಯಿಸಿದರೆ ದಂಪತಿಗಳು ಸುಖಮಯ ಜೀವನ ನಡೆಸಬಹುದು ಎಂದು ಆಶಿಸಿದರು.

ಸಾಮೂಹಿಕ ವಿವಾಹದಲ್ಲಿ 13 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಇದಕ್ಕೂ ಮುನ್ನ ಗಾಂಧಿನಗರದಿಂದ ಮೆರವಣಿಗೆ ಮೂಲಕ ವಧು-ವರರು ವೇದಿಕೆಗೆ ಆಗಮಿಸಿದರು.

ಈ ವೇಳೆ ಟ್ರಸ್ಟಿನ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ರಾಜ್ಯ ಪೌರಕಾರ್ಮಿಕ ಸಂಘದ ಕಾರ್ಯಾಧ್ಯಕ್ಷ ಎಲ್. ಎಂ ಹನುಮಂತಪ್ಪ, ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ಉಪ ಮೇಯರ್ ಸೋಗಿ ಶಾಂತಕುಮಾರ್, ಮಾಜಿ ಶಾಸಕ ಎಸ್. ರಾಮಪ್ಪ, ಸಮಾಜದ ಮುಖಂಡ ರವಿನಾರಾಯಣ್, ಎನ್.ರುದ್ರಮುನಿ, ಎನ್.ಜಿ. ಪುಟ್ಟಸ್ವಾಮಿ, ಹೆಗ್ಗೆರೆ ರಂಗಪ್ಪ, ಶೇಖರಪ್ಪ, ಮಾದಿಗ ಮತ್ತು ಛಲವಾದಿ ಸಮಾಜದ ಮುಖಂಡರು ಇದ್ದರು.

# ಕೃಷಿಯಲ್ಲಿ ಉದ್ಯೋಗ ಸೃಷ್ಟಿಯಾಗಲಿದೆ

## 'ನಿರುದ್ಯೋಗ ಸಮಸ್ಯೆ- ಪರಿಹಾರದ ಮಾರ್ಗಗಳು' ವಿಚಾರಗೋಷ್ಠಿಯಲ್ಲಿ ಜಗದೀಶ್

ದಾವಣಗೆರೆ, ಡಿ.15- ದೇಶದಲ್ಲಿ ದೊಡ್ಡ ಪ್ರಮಾಣದ ಕೃಷಿ ಭೂಮಿಯಿದೆ. ಇಲ್ಲಿ ಕೃಷಿ ಮಾಡಿದರೆ ಉದ್ಯೋಗ ಸೃಷ್ಟಿಯಾಗಲಿದೆ ಎಂದು ಜಗದೀಶ್ ಹೇಳಿದರು.

ಸ್ವದೇಶಿ ಜಾಗರಣ ಮಂಚ್ ವತಿಯಿಂದ ನಗರದ ಹೈಸ್ಕೂಲ್ ಮೈದಾನದಲ್ಲಿ ಏರ್ಪಡಿಸಿದ್ದ 'ನಿರುದ್ಯೋಗ ಸಮಸ್ಯೆ- ಪರಿಹಾರ ಮಾರ್ಗಗಳು' ಎಂಬ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ 14 ಲಕ್ಷ ಎಕರೆ ಭೂಮಿಯು ಕೃಷಿಗೆ ಯೋಗ್ಯವಾಗಿದೆ. ಅಲ್ಲಿ ಸಾವಯುವ ಕೃಷಿ ಮಾಡಲು ಯುವಕರು ಮುಂದಾಗಬೇಕು ಮತ್ತು ಮಿಶ್ರ ಬೆಳೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕೆಂದು ಸಲಹೆ ನೀಡಿದರು.

ಯುವಕರು ಉದ್ಯೋಗ ಹುಡುಕಾಟದ ಬದಲು ಉದ್ಯೋಗ ಸೃಷ್ಟಿಸುವಂತವರು ಆಗಬೇಕು. ಈ ನಿಟ್ಟಿನಲ್ಲಿ ದುಡಿಮೆ ಮಾಡುವಾಗ ಕೆಲಸದ ಬಗ್ಗೆ ಹಿಂಜರಿಕೆ ಇರಬಾರದು ಎಂದು ತಿಳಿಸಿದರು.

ವಿದ್ಯಾರ್ಥಿಗಳು ಹಾಗೂ ಯುವಕರಲ್ಲಿ ಕೌಶಲ್ಯಗಳ ಕೊರತೆ ಇರುವುದರಿಂದ ಯುವಕರು ಉದ್ಯೋಗ ವಂಚಿತರಾಗುತ್ತಿದ್ದಾರೆ. ಹಾಗಾಗಿ ಕಾಲೇಜುಗಳು ನಿರುದ್ಯೋಗಿಗಳನ್ನು ತಯಾರಿಸುವ ಕಾರ್ಖಾನೆಗಳಾಗಿವೆ ಎಂದು ದೂರಿದರು.

ದೇಶದಲ್ಲಿ ಸರ್ಕಾರವು ಸಣ್ಣ ಉದ್ಯಮಕ್ಕೆ ಸಾಲ ನೀಡುವಂತಾಗಬೇಕು. ಮುಖ್ಯವಾಗಿ ಯುವಕರಿಗೆ ಕೌಶಲ್ಯ ನೀಡುವ ಕಾರ್ಯಕ್ರಮಗಳು ಬರಬೇಕು ಎಂದ ಅವರು, ಇಂದಿನ ಸರ್ಕಾರಗಳು ಉದ್ಯೋಗ ಸೃಷ್ಟಿಸುವ ಉದ್ದೇಶ ಹೊಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಎಂ. ಆನಂದ್, ಬಸವರಾಜ್ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳಿದ್ದರು.

# ನಗರದಲ್ಲಿ ಇಂದು ತಾ. ಕಸಾಪ ದತ್ತಿ ಉಪನ್ಯಾಸ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋ ತ್ಸವದ ಅಂಗವಾಗಿ ಸ್ವಾಮಿ ವಿವೇಕಾನಂದ ಬಡಾವಣೆಯ ಚಿಕ್ಕನಹಳ್ಳಿ ದೊಡ್ಡಪ್ಪ ಪೌಢಶಾಲೆ ಆವರಣದಲ್ಲಿ ಇಂದು ಮಧ್ಯಾಹ್ನ 2 ಕ್ಕೆ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕನಹಳ್ಳಿ ದೊಡ್ಡಪ್ಪ ಪೌಢಶಾಲೆ ಮುಖ್ಯೋಪಾಧ್ಯಾಯ ಕೆ. ಶಿವಮೂರ್ತಿ ವಹಿಸಲಿದ್ದಾರೆ.

ನಾಗರಸನಹಳ್ಳಿ ಸರ್ಕಾರಿ ಪ್ರೌಢಶಾಲೆ ಕನ್ನಡ ಶಿಕ್ಷಕ ರವಿ ಹೆಚ್.ಎಸ್. ಇವರು 'ಕನ್ನಡ ಭಾಷೆಯ ಅಸ್ಮಿತೆ' ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ತಾಲ್ಲೂಕು ಕ. ಸಾ.ಪ. ದಾವಣಗೆರೆ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ಗೌರವ ಕಾರ್ಯದರ್ಶಿ ದಿಳ್ಯೆಪ್ಪ, ನಿರ್ದೇಶಕರಾದ ಶ್ರೀಮತಿ ಕೆ.ಜಿ. ಸೌಭಾಗ್ಯ ಮತ್ತು ರಟ್ಟಿಹಳ್ಳಿ ಶಿವಕುಮಾರ್ ಆಗಮಿಸುವರು.

ದಾವಣಗೆರೆ ತಾ॥ ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು ಪ್ರಾಸ್ತಾವಿಕ ನುಡಿಗಳನ್ನಾಡುವರು.

# ಏಕ ಚುನಾವಣೆಗೆ ಬೆಂಬಲಿಸಲು ಮಾಯಾವತಿ ಕರೆ

## ಮೀಸಲಾತಿಗೆ ಸಂಬಂಧಿಸಿದಂತೆ ಎಸ್‌ಪಿ, ಕಾಂಗ್ರೆಸ್‌ಗೆ ತರಾಟೆ

ಲಕ್ನೌ, ಡಿ. 15- ಪರಿಶಿಷ್ಟರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡುವುದನ್ನು ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳು ವಿರೋಧಿಸಿದ್ದವು. ಈ ಪಕ್ಷಗಳು ಮೀಸಲಾತಿ ಬಗ್ಗೆ ಮಾತನಾಡಬಾರದು ಎಂದು ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ಹೇಳಿದ್ದಾರೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಬಡ್ತಿಯಲ್ಲಿ ಮೀಸಲಾತಿ ನೀಡುವುದನ್ನು ಇತರ ಪ್ರತಿಪಕ್ಷಗಳ ಜೊತೆಗೆ ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳು ವಿರೋಧಿಸಿದ್ದವು ಎಂದು ಹೇಳಿರುವ ಮಾಯಾವತಿ, ಪರಿಶಿಷ್ಟ ಜಾತಿ, ಪಂಗಡ ಹಾಗೂ ಒಬಿಸಿ ಮೀಸಲಾತಿಯನ್ನು ಸಂವಿಧಾನದ ಒಂಭತ್ತನೇ ಪರಿಚ್ಛೇದದಲ್ಲಿ ಸೇರ್ಪಡೆ ಮಾಡಬೇಕು. ಇದರಿಂದ ಮೀಸಲಾತಿಗೆ ರಕ್ಷಣೆ ಸಿಗಲಿದೆ ಎಂದು ಹೇಳಿದ್ದಾರೆ.

ಲೋಕಸಭೆಯಲ್ಲಿ ಸಂವಿಧಾನದ ಕುರಿತು ಚರ್ಚೆ ನಡೆಯುವಾಗ ಆಡಳಿತಾರೂಢ ಹಾಗೂ ಪ್ರತಿಪಕ್ಷಗಳು ಮೀಸಲಾತಿ ಕುರಿತು ಆಧಾರ ರಹಿತ ಹೇಳಿಕೆ ನೀಡಿವೆ. ಅದರಲ್ಲೂ ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳು ದಲಿತರು ಮತ್ತು ಒಬಿಸಿ ಮತಗಳಿಗಾಗಿ ಸ್ವಲ್ಪವೂ ಸತ್ಯವಿರದ ಮಾತುಗಳನ್ನು ಆಡಿವೆ ಎಂದು ಪತ್ರಕರ್ತರೊಂದಿಗೆ ಮಾತನಾಡಿದ ಮಾಯಾವತಿ ತಿಳಿಸಿದ್ದಾರೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಪರಿಶಿಷ್ಟ ಜಾತಿ ಹಾಗೂ ಪಂಗಡ ಸಮುದಾಯದವರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡುವ ಸಂವಿಧಾನಿಕ ತಿದ್ದುಪಡಿ ಮಸೂದೆ ಮಂಡಿಸಲಾಗಿತ್ತು. ಆಗ ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳೆರಡೂ ತೀವ್ರವಾಗಿ ವಿರೋಧಿಸಿದ್ದವು ಎಂದರು.

ಸಮಾಜವಾದಿ ಪಕ್ಷದ ಸದಸ್ಯರು ಸಂಸತ್ತಿನಲ್ಲೇ ಮಸೂದೆಯನ್ನು ಹರಿದು ಎಸೆದಿದ್ದರು. ಈ ಮಸೂದೆ ಸಂಸತ್ತಿನಲ್ಲಿ ಈಗಲೂ ಬಾಕಿ ಉಳಿದಿದೆ ಎಂದವರು ಹೇಳಿದರು.

ಬಿಜೆಪಿ ಸಹ ಮೀಸಲಾತಿ ವಿರೋಧಿ ಮನೋಭಾವ ಹೊಂದಿದೆ. ಹೀಗಾಗಿ ಅವರೂ ಸಹ ಮಸೂದೆ ಜಾರಿಗೆ ತರುವ ನಿಲುವು ಹೊಂದಿಲ್ಲ ಎಂದು ಮಾಯಾವತಿ ಟೀಕಿಸಿದರು.

ಏಕಕಾಲಕ್ಕೆ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳ ಚುನಾವಣೆ ನಡೆಸುವುದನ್ನು ತಮ್ಮ ಪಕ್ಷ ಬೆಂಬಲಿಸುತ್ತದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಇತರೆ ಪಕ್ಷಗಳು ಸಹ ಪಕ್ಷ ರಾಜಕೀಯದಿಂದ ಮೇಲೆ ಬಂದು ಈ ಕ್ರಮವನ್ನು ಬೆಂಬಲಿಸಬೇಕು. ಏಕಕಾಲಕ್ಕೆ ಚುನಾವಣೆ ನಡೆಸುವುದು ದೇಶದ ಹಾಗೂ ಸಾರ್ವಜನಿಕರ ಹಿತದಲ್ಲಿದೆ ಎಂದವರು ತಿಳಿಸಿದರು.

## 1300 ಐಎಎಸ್ ಹುದ್ದೆಗಳು ಖಾಲಿ

ನವದೆಹಲಿ, ಡಿ. 15- 1316 ಐಎಎಸ್ ಹಾಗೂ 586 ಐಪಿಎಸ್ ಅಧಿಕಾರಿಗಳ ಹುದ್ದೆಗಳು ಖಾಲಿ ಇವೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ರಾಜ್ಯಸಭೆಗೆ ಲಿಖಿತ ಉತ್ತರ ನೀಡಿರುವ ಅವರು, ದೇಶದಲ್ಲಿ ಒಟ್ಟು 6,858 ಐಎಎಸ್ ಹುದ್ದೆಗಳಿವೆ. ಈ ಪೈಕಿ 5,542 ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ದೇಶದಲ್ಲಿ 5,055 ಐಪಿಎಸ್ ಅಧಿಕಾರಿಗಳ ಹುದ್ದೆಗಳಿದ್ದು, ಇವುಗಳಲ್ಲಿ 4,461 ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಸಚಿವ ಸಿಂಗ್ ಹೇಳಿದ್ದಾರೆ.

## ಕೊಟ್ಟೂರು : ಇಂದು ಕೊಟ್ಟೂರೇಶ್ವರನ ಕಾರ್ತಿಕೋತ್ಸವ, ಬೆಳ್ಳಿ ರಥೋತ್ಸವ



ಕೊಟ್ಟೂರಿನ ಆರಾಧ್ಯ ದೈವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಲಕ್ಷ ದೀಪೋತ್ಸವ, ಕಾರ್ತಿಕೋತ್ಸವ, ಬೆಳ್ಳಿ ರಥೋತ್ಸವ ಇಂದು ಜರುಗಲಿದೆ.

ಸ್ವಾಮಿಯ ದೇವಸ್ಥಾನದಿಂದ ಹಿಡಿದು ಗಚ್ಚಿನ ಮಠ, ತೊಟ್ಟಿಲು ಮಠ ಹಾಗೂ ಬಯಲು ಬಸವೇಶ್ವರ ದೇವಸ್ಥಾನದವರೆಗೂ ಬಣ್ಣ ಬಣ್ಣದ ವಿದ್ಯುತ್ ದೀಪದಿಂದ ಅಲಂಕರಿಸಲಾಗಿದೆ.

# ರಾಜಕೀಯ ಪಕ್ಷಗಳಿಗೂ ಲೈಂಗಿಕ ಪೀಡನೆ ತಡೆ ಕಾಯ್ದೆ ಅನ್ವಯಿಸಲು ಕಾರ್ಯಕರ್ತರ ಒತ್ತಾಯ

ನವದೆಹಲಿ, ಡಿ.15- ರಾಜಕೀಯ ಪಕ್ಷಗಳನ್ನೂ ಸಹ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಪೀಡನೆ ತಡೆ ಕಾಯ್ದೆಯ ವ್ಯಾಪ್ತಿಗೆ ತರಬೇಕು ಎಂದು ಕಾನೂನು ಪರಿಣಿತರು ಹಾಗೂ ಕಾರ್ಯಕರ್ತರು ಒತ್ತಾಯಿಸಿದ್ದಾರೆ. ಲಿಂಗ ಸಮಾನತೆ ಹಾಗೂ ಉತ್ತರದಾಯಿತ್ವಕ್ಕೆ ಈ ಕ್ರಮ ಅಗತ್ಯವಾಗಿದೆ ಎಂದವರು ಹೇಳಿದ್ದಾರೆ.

2013ರಲ್ಲಿ ಜಾರಿಗೆ ತರಲಾಗಿದ್ದ ಕೆಲಸದ ಸ್ಥಳದಲ್ಲಿ ಮಹಿಳೆಯರ ಸುರಕ್ಷತೆ ಕುರಿತ ಕಾಯ್ದೆಯನ್ನು ಜಾರಿಗೆ ತರಲು ರಾಜಕೀಯ ಪಕ್ಷಗಳು ಕ್ರಮ ತೆಗೆದುಕೊಳ್ಳಬೇಕು ಎಂಬ ಅರ್ಜಿಯನ್ನು ಸುಪ್ರೀಂ ಕೋರ್ಟ್ ಕಳೆದ ಸೋಮವಾರ ಇತ್ಯರ್ಥಗೊಳಿಸಿತ್ತು.

ರಾಜಕೀಯ ಪಕ್ಷಗಳಲ್ಲಿ ಈ ಕಾಯ್ದೆ ಜಾರಿಗೆ ತರುವ ಕುರಿತು ಅರ್ಜಿದಾರರು ಚುನಾವಣಾ ಆಯೋಗದ ಮೊರೆ ಹೋಗಬೇಕು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಮನಮೋಹನ್ ಅವರನ್ನು ಒಳಗೊಂಡ ಪೀಠ ಅರ್ಜಿದಾರರಿಗೆ ತಿಳಿಸಿತ್ತು.

ರಾಜಕೀಯ ಪಕ್ಷಗಳು ಕಾಯ್ದೆಯ ತಾಂತ್ರಿಕ ಅಂಶಗಳ ಕಡೆ ಗಮನಹರಿಸದೇ ಕಾಯ್ದೆಯ ತಿರುಳನ್ನು ಪಾಲಿಸಲು ಮುಂದಾಗಬೇಕು ಎಂದು ವಕೀಲೆ ಹಾಗೂ ಹೆಲ್ಪಿಂಗ್ ಹ್ಯಾಂಡ್ಸ್ ಸರ್ಕಾರೇತರ ಸಂಘಟನೆಯ ನಿರ್ದೇಶಕಿ ಸೋನಾಲ್ ಮಟ್ಟೂ ಹೇಳಿದ್ದಾರೆ.

ಕಾಯ್ದೆಯ ತಾಂತ್ರಿಕ ಅಂಶಗಳನ್ನು ಪರಿಗಣಿಸಿದರೆ ಯಾರು ಉದ್ಯೋಗಿ ಹಾಗೂ ಯಾರು ಉದ್ಯೋಗ ದಾತ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ ಕಾಯ್ದೆಯ ತಿರುಳನ್ನು ನೋಡಿದಾಗ ಪ್ರತಿಯೊಂದು ರಾಜಕೀಯ ಪಕ್ಷವು ಈ ಕಾಯ್ದೆ ಜಾರಿಗೆ ತರಬಹುದು. ಪ್ರತಿಯೊಂದು ಪಕ್ಷದಲ್ಲೂ ಶಿಸ್ತು ಸಮಿತಿ ಇದ್ದೇ ಇರುತ್ತದೆ. ಹೀಗಾಗಿ ಮಹಿಳೆಯರ ರಕ್ಷಣೆಗೆ ರಾಜಕೀಯ ಪಕ್ಷಗಳು ಕ್ರಮ ತೆಗೆದುಕೊಳ್ಳಬಹುದು ಎಂದವರು ತಿಳಿಸಿದರು.

ಪಕ್ಷದ ಕಾರ್ಯಕರ್ತರು ಹಾಗೂ ಪಕ್ಷದಲ್ಲಿರುವವರ ಜೊತೆ ವ್ಯವಹರಿಸುವ ಕುರಿತು ಸಮಿತಿ ಒಂದನ್ನು ರಚಿಸಬಹುದು. ಸಹೋದ್ಯೋಗಿಗಳ ಜೊತೆ ವ್ಯವಹರಿಸುವ ಕುರಿತು ನಿಯಮಗಳನ್ನು ರೂಪಿಸುವ ಸಮಿತಿ ರಚಿಸುವುದು ಸುಲಭವಾಗಿದೆ ಎಂದು ಮಟ್ಟೂ ಹೇಳಿದ್ದಾರೆ.

ಆದರೆ ಆಂತರಿಕ ಸಮಿತಿಗಳು ಪ್ರಭಾವಿ ರಾಜಕೀಯ ವ್ಯಕ್ತಿಗಳ ಕೈಯಲ್ಲಿ ಇರುವುದರಿಂದ ಇವು ಎಷ್ಟರ ಮಟ್ಟಿಗೆ ಸ್ವತಂತ್ರವಾಗಿರುತ್ತವೆ ಎಂಬ ಬಗ್ಗೆ ಹಿರಿಯ ವಕೀಲೆ ಶಿಲ್ಪಿ ಜೈನ್ ಅನುಮಾನ ವ್ಯಕ್ತಪಡಿಸಿದ್ದಾರೆ.

ಆಂತರಿಕ ಸಮಿತಿಗಳಿಗೆ ರಾಜಕೀಯ ಗುಂಪುಗಳೇ ಹಣಕಾಸು ಒದಗಿಸಿರುತ್ತವೆ ಹಾಗೂ ಇವುಗಳಿಗೆ ಬಲ ಇರುವುದಿಲ್ಲ. ಇಂತಹ ಸಮಿತಿಗಳು ಕಾರ್ಯನಿರ್ವಹಿಸಬೇಕಾದರೆ ಸ್ವಾತಂತ್ರ್ಯ ಹಾಗೂ ದಿಟ್ಟತನ ಅಗತ್ಯವಾಗಿದೆ. ಆದರೆ ಹಲವಾರು ರಾಜಕಾರಣಿಗಳು ಅಧಿಕಾರ ದುರ್ಬಳಕೆ ಮಾಡಿಕೊಳ್ಳುವುದನ್ನು ನೋಡಿದಾಗ ಇದು ಸವಾಲಾಗಿದೆ ಎಂದವರು ತಿಳಿಸಿದ್ದಾರೆ.

ರಾಜಕಾರಣಿಗಳು ಭಾಗಿಯಾಗಿರುವ ಲೈಂಗಿಕ ಪೀಡನೆ ಪ್ರಕರಣಗಳನ್ನು ನ್ಯಾಯಾಲಯದ ಮೂಲಕ ಇತ್ಯರ್ಥಪಡಿಸುವುದೇ ಸೂಕ್ತ ಎಂದವರು ಅಭಿಪ್ರಾಯಪಟ್ಟಿದ್ದಾರೆ.

ರಾಜಕೀಯ ಪಕ್ಷಗಳಲ್ಲಿ ಲೈಂಗಿಕ ಪೀಡನೆ ತಡೆ ವ್ಯವಸ್ಥೆ ರೂಪಿಸುವುದರಿಂದ ಸಮಾಜದಲ್ಲಿ ಲಿಂಗ ಸಮಾನತೆಗೆ ಮಾದರಿ ರೂಪಿಸಿದಂತಾಗುತ್ತದೆ ಎಂದು ಅನಾಹದ್ ಸರ್ಕಾರೇತರ ಸಂಸ್ಥೆಯ ಸ್ಥಾಪಕಿ ಶಬನಾ ಹಶ್ಮಿ ಅಭಿಪ್ರಾಯಪಟ್ಟಿದ್ದಾರೆ.

ಲಿಂಗ ಸಮಾನತೆಯ ವಿಷಯದಲ್ಲಿ ರಾಜಕಾರಣಿಗಳು ಮಾದರಿಯಾಗಿರಬೇಕು. ಅವರು ಲಿಂಗ ಸಮಾನತೆಯನ್ನು ಕಡೆಗಣಿಸಿದರೆ ಸಮಾಜಕ್ಕೆ ತಪ್ಪು ಸಂದೇಶ ನೀಡಿದಂತಾಗುತ್ತದೆ. ರಾಜಕೀಯ ಪಕ್ಷಗಳಲ್ಲಿ ಇಂತಹ ಸಮಿತಿಗಳನ್ನು ರಚಿಸುವುದರಿಂದ ನಿಧಾನವಾಗಿಯಾದರೂ ಪ್ರಮುಖ ಬದಲಾವಣೆ ಸಾಧ್ಯವಾಗುತ್ತದೆ. ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಜಾರಿಗೆ ತಂದ ನಂತರ ಇಂತಹ ಬದಲಾವಣೆಗಳನ್ನು ಕಂಡಿದ್ದೇವೆ ಎಂದವರು ತಿಳಿಸಿದ್ದಾರೆ.

ಮಹಿಳಾ ಶೋಷಣೆ ತಡೆಯಲು ಕಾಯ್ದೆ ರೂಪಿಸುವಾಗ ಸಂಸತ್ತು ರಾಜಕೀಯ ಪಕ್ಷಗಳನ್ನೇ ಇದರ ವ್ಯಾಪ್ತಿಯಿಂದ ಹೊರಗಿಟ್ಟಿರುವುದು ವಿಡಂಬನೆಯಾಗಿದೆ ಎಂದು ಪರಿ ಸಂಘಟನೆಯ ಸ್ಥಾಪಕಿ ಹಾಗೂ ಕಾರ್ಯಕರ್ತೆ ಯೋಗಿನಾ ಭಯನಾ ಹೇಳಿದ್ದಾರೆ.

ಹತ್ತಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರುವ ಸಂಸ್ಥೆ ಶೋಷಣೆ ತಡೆ ವ್ಯವಸ್ಥೆ ಹೊಂದಬೇಕು ಎಂದು ಕಾನೂನು ಹೇಳುತ್ತದೆ. ಹೀಗಿರುವಾಗ ರಾಜಕೀಯ ಪಕ್ಷಗಳಿಗೆ ವಿನಾಯಿತಿ ನೀಡಲು ಹೇಗೆ ಸಾಧ್ಯ? ಸಂಸತ್ತು ತಾನೇ ರೂಪಿಸಿರುವ ಕಾಯ್ದೆಯಲ್ಲಿ ರಾಜಕೀಯ ಪಕ್ಷಗಳಿಗೆ ವಿನಾಯಿತಿ ನೀಡಿರುವುದನ್ನು ನೋಡಿದರೆ ರಾಜಕೀಯ ವ್ಯವಸ್ಥೆಯ ಹಿಂಜರಿಕೆ ಸ್ಪಷ್ಟವಾಗುತ್ತದೆ ಎಂದವರು ಹೇಳಿದ್ದಾರೆ.

ಹಲವಾರು ವಲಯಗಳಲ್ಲಿ ಲೈಂಗಿಕ ಪೀಡನೆ ತಡೆ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೆ ತಂದಿಲ್ಲ. ಈ ಬಗ್ಗೆ ವಿಸ್ತೃತವಾದ ಹಾಗೂ ಪರಿಣಾಮಕಾರಿ ಕ್ರಮಗಳ ಅಗತ್ಯವಿದೆ ಎಂದವರು ತಿಳಿಸಿದ್ದಾರೆ.

ಈ ಕಾಯ್ದೆಯಲ್ಲಿ ಕೆಲಸದ ಸ್ಥಳ ಎಂಬ ವ್ಯಾಖ್ಯಾನ ಹಲವು ತೊಡಕುಗಳಿಗೆ ಕಾರಣವಾಗಿದೆ. ರಾಜಕೀಯ ಪಕ್ಷಗಳಲ್ಲಿ ಉದ್ಯೋಗಿ ಹಾಗೂ ಉದ್ಯೋಗದಾತ ಎಂಬ ಸಾಂಪ್ರದಾಯಿಕ ಸಂಬಂಧ ಇಲ್ಲ ಎಂದು 2022 ರಲ್ಲಿ ಕೇರಳ ಹೈಕೋರ್ಟ್ ತಿಳಿಸಿತ್ತು.

ಇಷ್ಟಾದರೂ ಸಹ ರಾಜಕೀಯ ಪಕ್ಷಗಳು ತಾವಾಗಿಯೇ ಶೋಷಣೆ ತಡೆಗಾಗಿ ವ್ಯವಸ್ಥೆ ರೂಪಿಸಲು ಮುಂದಾಗಬಹುದು ಎಂದು ಹಲವು ಪರಿಣಿತರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ಕ್ರಮದಿಂದ ರಾಜಕೀಯದಲ್ಲಿ ಮಹಿಳೆಯರು ಭಾಗಿಯಾಗುವ ಪ್ರಮಾಣ ಹೆಚ್ಚಿಸಬಹುದು ಎಂದು ಅಭಿಪ್ರಾಯಪಡಲಾಗುತ್ತಿದೆ.

# ಪುಸ್ತಕಗಳು ನಾವು ಹೇಗೆ ಬದುಕಬೇಕು ಎಂಬುದನ್ನು ಕಲಿಸುತ್ತವೆ

ಮನುಷ್ಯನು ತನ್ನ ಮಕ್ಕಳಿಗೆ ಏನನ್ನಾದರೂ ಬಿಟ್ಟು ಹೋಗುವುದಿದ್ದರೆ, ಬ್ಯಾಂಕಿನ ಠೇವಣೆಯನ್ನಲ್ಲ, ಒಳ್ಳೆಯ ಪುಸ್ತಕಗಳಿಂದ ತುಂಬಿದ ಗೃಹ ಗ್ರಂಥಾಲಯವನ್ನು ಬಿಟ್ಟು ಹೋಗಬೇಕು ಅದರಲ್ಲಿ ಮನುಷ್ಯರಿಗೆ ಬೇಕಾದುದೆಲ್ಲವೂ ಇರುತ್ತವೆ,

**ಗ್ರಂಥಾಲಯವೊಂದು ದೇವಾಲಯ**
**ಗ್ರಂಥಗಳೇ ದೇವರು**
**ಓದುವಿಕೆಯೇ ಭಕ್ತಿಯ ಪೂಜೆ**
**ಓದುಗರೇ ಭಕ್ತರು !**

ಈ ಜಗತ್ತು ಕಂಡಿರುವ ಮನುಷ್ಯ ನಿರ್ಮಾಣದ ಅತ್ಯಂತ ಗಮನಾರ್ಹ ಸೃಷ್ಟಿ ಎಂದರೆ ಪುಸ್ತಕಗಳು, ನಾವು ಅಳಿದರೂ ಪುಸ್ತಕಗಳು ಬದುಕಿ ಉಳಿದಿರುತ್ತವೆ. ಮನುಷ್ಯ ಕಟ್ಟಿರುವುದು ಯಾವುದೂ ಸ್ಥಿರವಾಗಿ ನಿಲ್ಲುವುದಿಲ್ಲ, ಕೀರ್ತಿ ಸ್ತಂಭಗಳು ಕುಸಿದು ಬೀಳುತ್ತವೆ. ರಾಷ್ಟ್ರಗಳು ನಾಶಗೊಳ್ಳುತ್ತವೆ, ನಾಗರಿಕತೆಗಳಿಗೆ ವೃದ್ಧಾಪ್ಯ ಬಂದು ಅವು ಸತ್ತೋಗುತ್ತವೆ ಆದರೆ ಪುಸ್ತಕಗಳಿಗೆ ಸಾವು ಬರುವುದಿಲ್ಲ.

ಹೃದಯದಿಂದ ಬಂದರು ಹೃದಯಕ್ಕೆ ಹೋಗುತ್ತದೆ. ಹೃದಯದಿಂದ ಬಂದ ಪುಸ್ತಕವು ಶತಮಾನಗಳ ನಂತರವೂ ಇನ್ನೂ ಜನ್ಮವೆತ್ತಿ ಬರದಿರುವ ಪೀಳಿಗೆಗಳ ಹೃದಯಗಳನ್ನು ತಟ್ಟುತ್ತವೆ, ಗುರುಗಳು ನಮಗೆ ಕೆಲವೊಂದನ್ನು ಹೇಳಬಹುದು, ಅವರು ನಮಗೆ ಹೇಳಿದ, ಹೇಳದೇ ಇರುವ ಎಲ್ಲಾ ಜ್ಞಾನವೂ ಪುಸ್ತಕಗಳಲ್ಲಿ ಇರುತ್ತದೆ, ನಮಗೆ ಬೋಧೆ ನೀಡುವ ಜನರಲ್ಲಿ ಇಲ್ಲದ ಒಂದು ದೊಡ್ಡ ಗುಣ ಪುಸ್ತಕಗಳಲ್ಲಿ ಇರಬಹುದು, ಆದರೆ ಪುಸ್ತಕಗಳು ನಮಗೆ ಬೇಕಾದುದನ್ನು



ಬೇಸರವಿಲ್ಲದೆ ಎಷ್ಟು ಸಲವಾದರೂ ಪುನರುಚ್ಚರಿಸುತ್ತವೆ,

ಮನುಷ್ಯನು, ತನ್ನ ಸ್ನೇಹಿತರನ್ನು ಆರಿಸಿಕೊಳ್ಳುವಂತೆ, ತಾನು ಓದುವ ಪುಸ್ತಕಗಳನ್ನು ಆರಿಸಿಕೊಳ್ಳಬೇಕು, ಯಾರು ನಮ್ಮನ್ನು ವಂಚಿಸಿದರೂ ಪುಸ್ತಕಗಳು ನಮ್ಮನ್ನು ವಂಚಿಸಲಾರವು, ಪುಸ್ತಕಗಳು ನಮಗೆ ಒಳ್ಳೆಯ ಪ್ರೀತಿಯಿಂದ ಹೇಗೆ ಬದುಕಬೇಕೆನ್ನುವುದನ್ನು ಹೇಳಿಕೊಡುತ್ತವೆ, ನಾವು ಬದುಕುವುದಕ್ಕೋಸುಗ ತಿಳಿಯಬೇಕಲ್ಲದೆ, ತಿಳಿಯುವುದಕ್ಕೋಸುಗ ಬದುಕಬಾರದು,

ನಾವು ಪುಸ್ತಕಗಳಿಂದ ಕಲಿಯುವುದು ಇರುವಂತೆ ಜಗತ್ತಿನಿಂದ ಕಲಿಯುವುದೂ ಇದೆ, ಅದಕ್ಕೆಂತಲೇ, ಕೋಶ ಓದಬೇಕು, ದೇಶ ನೋಡಬೇಕು ಎಂದು ಹೇಳುತ್ತಾರೆ, ನಿಜವಾದ ಬುದ್ಧಿವಂತರು ಪುಸ್ತಕಗಳನ್ನು ಓದುವಂತೆ ಜೀವನವನ್ನೂ ಓದಬೇಕೆಂದು ಹೇಳುತ್ತಾರೆ,

ಮನುಷ್ಯನ ಚಾರಿತ್ರ್ಯವು ಅವನು ಯಾರೊಂದಿಗೆ ಇರುವನು ಅವರೊಂದಿಗೆ ನಿರ್ಮಾಣವಾಗುವಂತೆ, ಅದು, ಅವನು ಓದುವ ಪುಸ್ತಕಗಳಿಂದಲೂ ನಿರ್ಮಾಣವಾಗುತ್ತದೆ.

ಸ್ನೇಹಿತರೇ, 'ಬುದ್ಧಿ ಬರಲು ಸ್ವಂತ ಓದಬೇಕು ಗ್ರಂಥ' ನುಡಿ ಸತ್ಯವಾದದ್ದು, ನಾವೆಲ್ಲರೂ ಇಂದಿನಿಂದಲೇ ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳೋಣ, ಬಿಡುವಿನ ಸಮಯದಲ್ಲಿ ಓದುತ್ತಾ ನಮ್ಮ ಮಕ್ಕಳನ್ನೂ ಓದುಗರನ್ನಾಗಿ ಮಾಡೋಣ, ಮಕ್ಕಳಲ್ಲಿ ಆಟ ಆಡುವ ಅಭ್ಯಾಸ ಬೆಳೆಯುವಷ್ಟು ಸಹಜವಾಗಿ ನಮ್ಮಲ್ಲಿ ಪುಸ್ತಕ ಓದುವ ಹವ್ಯಾಸ ಬೆಳೆಸಬೇಕು, ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ, ಗ್ರಂಥಾಲಯಗಳೇ ಮಕ್ಕಳ ಮೊದಲ ಜ್ಞಾನ ದೇಗುಲಗಳು, ಸಂಪತ್ತನ್ನು ಉಪಯೋಗಿಸಿದ್ದಲ್ಲಿ ತೀರಿಹೋಗುತ್ತದೆ, ವಿದ್ಯೆಯನ್ನು ಉಪಯೋಗಿಸಿದರೆ ಮತ್ತೆ ಮತ್ತೆ ಹೆಚ್ಚಾಗುತ್ತದೆ, ಸರಸ್ವತಿ ಸದಾ ನಮ್ಮ ಮನೆಯಲ್ಲಿ ನೆಲೆಸಿರುವಂತೆ ನೋಡಿಕೊಳ್ಳೋಣ ಶುಭವಾಗಲಿ.

**- ಜೆಂಬಿಗಿ ಮೃತ್ಯುಂಜಯ,**
ಕನ್ನಡ ಉಪನ್ಯಾಸಕರು, ದಾವಣಗೆರೆ.

# ಗುಕೇಶ್ ದೊಮ್ಮರಾಜು



ಚದುರಂಗದ ಆಟ ಅದೆಷ್ಟು
ಜಟಿಲ
ಆದರೆ ಅವನಿಗದು
ಲೀಲಾಜಾಲ
ಹದಿನೆಂಟರ ಹದಿ ಹರೆಯದ
ಪೋರ
ಏರಿದ್ದಾನೆ ಚದುರಂಗದ ಸಾಧನೆಯ ಶಿಖರ
ಭಾರತದ ಹೆಮ್ಮೆಯ ಗುಕೇಶ್ ದೊಮ್ಮರಾಜು
ಈಗ ಆತ ಹದಿನೆಂಟನೆಯ ವಿಶ್ವವಿಜೇತ

ಏಳನೇ ವಯಸ್ಸಿನಲ್ಲಿ ಚದುರಂಗದ ಕಲಿಕೆ
ಹನ್ನೆರಡನೇ ವರ್ಷಕ್ಕೆ ವಿಶ್ವ ವಿಜೇತನಾಗುವ ಆಸೆ
ಅದು ಬರೀ ಕನಸಲ್ಲ, ಅದಾಗಿತ್ತು ಅವನ ಗುರಿ
ಭರವಸೆ, ನಂಬಿಕೆಗೆ ಜೊತೆಯಾಗಿ ಅವಿರತ ಶ್ರಮ
ಪ್ರತಿಫಲವಾಗಿ ದೊರೆತದ್ದೇ ವಿಶ್ವವಿಜೇತ ಕಿರೀಟ
ಚದುರಂಗದಲ್ಲಿ ಜಗತ್ತಿಗೆ ಅತ್ಯಂತ ಕಿರಿಯನೆಂಬ
ಮುಕುಟ

ತಂದೆ ತಾಯಿಯ ಸಂಪೂರ್ಣ ಸಹಕಾರ, ತ್ಯಾಗ
ವ್ಯರ್ಥವಾಗಲು ಬಿಡಲಿಲ್ಲ ಅವರ ಮಗ
ಅಚಲ ವಿಶ್ವಾಸ,ಪರಿಶ್ರಮದ ಜ್ಞಾನದಿಂದ
ಎದುರಾಳಿಯ ದಾಳ ಉರುಳಿ ಬಿದ್ದು ಗೆದ್ದಾಗ
ಕನಸು ನನಸಾದ ಆ ಸಮಯ ಅದ್ಭುತ ಕ್ಷಣ
ಕಣ್ಣುಗಳಲ್ಲಿ ಕೃತಜ್ಞತೆ ತುಂಬಿದ ಕಣ್ಣೀರು.....

**- ಅನುಪಮ ವಿರೂಪಾಕ್ಷಪ್ಪ,** ದಾವಣಗೆರೆ.

# ಪುಸ್ತಕಾಲಯಗಳೇ ನಿಜವಾದ ದೇವಾಲಯಗಳು



ಜನರಲ್ಲಿ ಓದುವ ಸಂಸ್ಕೃತಿ ಬಿತ್ತುತ್ತಾ ಬಂದಿರುವ ನಾಡಿನ ಪ್ರತಿಷ್ಠಿತ, ದೇಶದ ಅತೀ ದೊಡ್ಡಪುಸ್ತಕ ಭಂಡಾರ 'ಸಪ್ನ ಬುಕ್ ಹೌಸ್'ನ 23ನೇ ಶಾಖೆಯನ್ನು ದಾವಣಗೆರೆಯಲ್ಲಿ ಪ್ರಾರಂಭಿಸಿ ರುವುದು ಸ್ವಾಗತಾರ್ಹ. ಇಂತಹ ಪುಸ್ತಕದ ಅಂಗಡಿಗಳು, ಗ್ರಂಥಾಲಯಗಳು, ಉದ್ಯಾನವ ನಗಳು ಹೆಚ್ಚಿಗೆಯಾಗಬೇಕು. ಇವು ನಿಜವಾದ ದೇವಾಲಯಗಳು. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಬಹಳ ಹಿಂದೆಯೇ 'ಜನರು ದೇವಸ್ಥಾನಗಳಿಗೆ ಸರದಿ ನಿಲ್ಲುವುದನ್ನು ಬಿಟ್ಟು ಗ್ರಂಥಾಲಯ, ಪುಸ್ತಕಾಲಯಗಳಿಗೆ ಸರದಿ ನಿಲ್ಲಬೇಕು' ಎಂದಿದ್ದರು. ಆಗ ಮಾತ್ರ ಅವರಲ್ಲಿ ವಿಚಾರಶಕ್ತಿ ಹೆಚ್ಚಾಗಿ ಮೌಢ್ಯಗಳು ದೂರವಾಗು ತ್ತವೆ. ಜನರಲ್ಲಿ ವೈಚಾರಿಕತೆ, ಮಾನವೀಯತೆ ಬೆಳೆದು ಸರ್ವೋದಯ ಉಂಟಾಗುತ್ತದೆ. ಬಾರ್‌ಗಳು, ಪೊಲೀಸ್ ಸ್ಟೇಷನ್, ಕೋರ್ಟ್‌ಗಳು ಇವುಗಳು ಸ್ವಾಗತಾರ್ಹವಲ್ಲ. ಪುಸ್ತಕಾಲಯಗಳು, ಗ್ರಂಥಾಲಯಗಳು, ಸ್ನೇಹ, ಪ್ರೀತಿ, ಕರುಣೆ, ಮೈತ್ರಿ ಇವುಗಳು ಮಾತ್ರ ಸರ್ವೋದಯಕ್ಕೆ ನಾಂದಿ ಹಾಡಬಲ್ಲವು.

ಇತ್ತೀಚಿನ ಸೋಶಿಯಲ್ ಮೀಡಿಯಾಗಳಿಂದಾಗಿ ಪುಸ್ತಕೋದ್ಯಮ ಬಹಳ ಬಿಕ್ಕಟ್ಟನ್ನು ಎದುರಿಸುತ್ತಿದೆ. ಓದುಗರ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ. ಆದರೂ ಪುಸ್ತಕಗಳ ಪ್ರಕಟಣೆ ಕಡಿಮೆಯಾಗಿಲ್ಲ.

ಕೇವಲ ದೊಡ್ಡ ದೊಡ್ಡ ನಗರಗಳಲ್ಲಿ ಪುಸ್ತಕಾಲಯಗಳಿವೆ. ದಾವಣಗೆರೆಯಲ್ಲಿ ನವಕರ್ನಾಟಕ ಪುಸ್ತಕದ ಅಂಗಡಿ ಮಾತ್ರ ಇತ್ತು. ಅದರ ಜೊತೆಗೆ ಈಗ ಸಪ್ನ ಬುಕ್ ಹೌಸ್ ಪ್ರಾರಂಭವಾಗಿರುವುದು ದಾವಣಗೆರೆ ನಗರದ ಜನತೆ ಸಂತಸಪಡಬೇಕಾದ ವಿಷಯ. ವಿದ್ಯಾನಗರಿ ಎಂದೇ ಪ್ರಸಿದ್ಧಿಯಾಗಿರುವ ನಮ್ಮ ದಾವಣಗೆರೆಗೆ ಇಂತಹ ಪುಸ್ತಕ ಭಂಡಾರದ ಸಂಸ್ಥೆಯ ಅಗತ್ಯವಿತ್ತು. ಪುಸ್ತಕ ಪ್ರಿಯರೆಲ್ಲರ ಕನಸು ನನಸಾಗಿದೆ.

ಒಂದು ಪುಸ್ತಕವನ್ನು ಮನೆಗೆ ತಂದರೆ ಒಬ್ಬ ಅತ್ಯುತ್ತಮ ಸ್ನೇಹಿತನನ್ನು ಮನೆಗೆ ಕರೆತಂದಂತೆ. ಬಾಲಗಂಗಾಧರ ತಿಲಕ್ ರವರು 'ನಾನು ನರಕದಲ್ಲಿದ್ದಾಗಲೂ ಒಳ್ಳೆಯ ಪುಸ್ತಕಗಳನ್ನೇ ಸ್ವಾಗತಿಸುತ್ತೇನೆ. ಅವು ಇದ್ದಲ್ಲಿ ಸ್ವರ್ಗ ತಂತಾನೇ ಹುಟ್ಟುತ್ತದೆ'. ರವೀಂದ್ರನಾಥ ಠಾಕೂರ್ ರವರು 'ಬದುಕನ್ನು ಬೆಳಗಿಸಲು ಪುಸ್ತಕಗಳೇ ದಾರಿದೀಪ'. ಸ್ವಾಮಿ ವಿವೇಕಾನಂದರು 'ಪುಸ್ತಕಗಳು ಒಳ್ಳೆಯವಾಗಿದ್ದರೆ ಅವು ಇಡೀ ಸಮಾಜಕ್ಕೆ ಒಳ್ಳೆಯದನ್ನು ಮಾಡಬಲ್ಲವು. ಹಾಗಾಗಿ ನೀನು ಬರೆಯುವುದಿದ್ದರೆ ಒಳ್ಳೆಯದನ್ನೇ ಬರೆ' ಎಂದಿದ್ದಾರೆ. ಈ ಮಾತುಗಳಲ್ಲಿ ಪುಸ್ತಕದ ಮಹತ್ವವನ್ನು ತಿಳಿಯಬಹುದಾಗಿದೆ.

**- ಶಿವನಕೆರೆ ಬಸವಲಿಂಗಪ್ಪ,** ದಾವಣಗೆರೆ.

# 20 ಲಕ್ಷ ಜನ ಸೇರಿಸಿ ಬಿಎಸ್‌ವೈ ಹುಟ್ಟುಹಬ್ಬ

**(1ನೇ ಪುಟದಿಂದ)** ಮಠಾಧೀಶರನ್ನು ಆಹ್ವಾನಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮಾತನಾಡಿ, ಪಕ್ಷವನ್ನು ಕಟ್ಟಿ ಬೆಳೆಸಿದ ಯಡಿಯೂರಪ್ಪ ಅವರು ಚುನಾವಣಾ ಕಣದಿಂದ ಮಾತ್ರ ಹಿಂದೆ ಸರಿದಿದ್ದಾರೆ, ರಾಜಕಾರಣದಲ್ಲಿ ಇನ್ನೂ ಸಕ್ರಿಯರಾಗಿದ್ದಾರೆ. ಅವರ ಜನ್ಮದಿನದಂದು 20 ಲಕ್ಷ ಜನರನ್ನು ಸೇರಿಸಿ ಅದ್ಧೂರಿ ಹುಟ್ಟು ಹಬ್ಬ ಆಚರಿಸಿ, ರಾಜ್ಯಕ್ಕೆ ಸಂದೇಶ ರವಾನೆ ಮಾಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಇಂದಿನ ಸಭೆಯ ನಿರ್ಣಯಗಳನ್ನು ಪಕ್ಷದ ಹೈಕಮಾಂಡ್ ಗಮನಕ್ಕೆ ತರಲು ಶೀಘ್ರದಲ್ಲೇ ದೆಹಲಿಗೆ ನಿಯೋಗ ತೆರಳಲಿದ್ದೇವೆ ಎಂದು ಹೇಳಿದರು.

ನಾವೆಲ್ಲರೂ ಪಕ್ಷದ ನಿಷ್ಠಾವಂತ ಕಾರ್ಯಕರ್ತರು, ನಮಗೆಲ್ಲರಿಗೂ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಕೊಡಬೇಕು ಎಂಬ ಬೇಡಿಕೆ ಇದೆ. ಎಲ್ಲರಿಗೂ ಸೂಕ್ತ ಸ್ಥಾನಮಾನ ಕೊಡಬೇಕು ಅನ್ನೋದು ನಮ್ಮ ಅಭಿಪ್ರಾಯವಾಗಿದೆ. ಇಂದು ನಡೆದ ಸಭೆಯಲ್ಲಿ 10 ಜನ ಪ್ರಮುಖರ ಸಮಿತಿ ರಚನೆ ಮಾಡಲಾಗಿದೆ. ರಾಜಕೀಯ ಸಮಾವೇಶ ಮಾಡಲು ಅವಕಾಶ ಇಲ್ಲದಿರುವುದರಿಂದ ಯಡಿಯೂರಪ್ಪ ಅವರ ಹುಟ್ಟುಹಬ್ಬ ಆಚರಣೆ ಮಾಡುತ್ತೇವೆ. ಜನವರಿ 16ಕ್ಕೆ ಮತ್ತೆ ಸಭೆ ಮಾಡುತ್ತೇವೆ ಎಂದು ತಿಳಿಸಿದರು.

ಮಾಜಿ ಸಚಿವರಾದ ಹರತಾಳು ಹಾಲಪ್ಪ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಕೊಳ್ಳೆಗಾಲ ಮಹೇಶ್, ಮಾಜಿ ಶಾಸಕರಾದ ಎಸ್.ವಿ. ರಾಮಚಂದ್ರಪ್ಪ, ಬ್ಯಾಡಗಿ ಬಳ್ಳಾರಿ ವಿರುಪಾಕ್ಷಪ್ಪ, ರಾಣೇಬೆನ್ನೂರು ಅರುಣ್ ಕುಮಾರ್ ಪೂಜಾರ, ಮಾನ್ವಿ ಗಂಗಾಧರ ನಾಯ್ಕ, ಶಿವಮೊಗ್ಗ ಕುಮಾರಸ್ವಾಮಿ, ಸೀಮಾ ಮಸೂತಿ, ಎಂ. ಬಸವರಾಜ್ ನಾಯ್ಕ, ಮಾಡಾಳು ವಿರೂಪಾಕ್ಷಪ್ಪ, ಮೊಳಕಾಲ್ಮೂರು ತಿಪ್ಪೇಸ್ವಾಮಿ, ಕಡೂರು ಬೆಳ್ಳಿ ಪ್ರಕಾಶ್, ರಾಜಶೇಖರ್ ಶೀಲವಂತ್, ಮಸ್ಕಿ ಪ್ರತಾಪ್ ಗೌಡ, ಮೈಸೂರು ನಾಗೇಂದ್ರ, ಗುಂಡ್ಲುಪೇಟೆ ನಿರಂಜನ್, ಜಗದೀಶ್ ಮೆಟ್‌ಗುಡ್, ಸುರೇಶ್ ಮಾರಿಹಾಳ್. ವಿಶ್ವನಾಥ್ ಪಟೇಲ್, ತರೀಕೆರೆ ಶಾಸಕ ಸುರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಮುಖಂಡರಾದ ಮಾಡಾಳ್ ಮಲ್ಲಿಕಾರ್ಜುನ್, ಬಿ.ಜಿ. ಅಜಯ್ ಕುಮಾರ್, ಲೋಕಿಕೆರೆ ನಾಗರಾಜ್ ಸೇರಿದಂತೆ ಹಲವರು ಸಭೆಯಲ್ಲಿ ಭಾಗವಹಿಸಿದ್ದರು.

## ಬಣವೂ ಅಲ್ಲ, ಪರ್ಯಾಯವೂ ಅಲ್ಲ

**(1ನೇ ಪುಟದಿಂದ)** ಇಲ್ಲಿ ಸಭೆ ನಡೆಸಿದ್ದೇವೆ ಎಂದು ಹೇಳಿದರು. ರಾಜಕೀಯ ಸಭೆ ಕರೆಯುವ ಅಧಿಕಾರ ಇರುವುದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ಮಾತ್ರ. ಯಡಿಯೂರಪ್ಪ ಅವರ ಅಭಿಮಾನಿಗಳು ಮಾತ್ರವೇ ಸಭೆ ಸೇರಿ ಜನ್ಮದಿನಾಚರಣೆ ಕುರಿತು ಚರ್ಚೆ ಮಾಡಿದ್ದೇವೆ. ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ನೇತೃತ್ವದಲ್ಲಿ ಸಮಾರಂಭ ಆಯೋಜಿಸಲಿದ್ದೇವೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾಹಿತಿ ನೀಡಿದರು.

ಈ ಸಭೆಗೆ ಇನ್ನು ಕೆಲವರು ಕಾರಣಾಂತರಗಳಿಂದ ಬಂದಿಲ್ಲ ಅವರು ಸಭೆಯನ್ನು ಬೆಂಬಲಿಸಿ ಸಂದೇಶ ಕಳುಹಿಸಿದ್ದಾರೆ ಎಂದು ರೇಣುಕಾಚಾರ್ಯ ತಿಳಿಸಿದರು

### ಸಭೆ ನಿರ್ಣಯಗಳು

- 2025ರ ಫೆಬ್ರವರಿ 27ರಂದು 20 ಲಕ್ಷ ಜನರನ್ನು ಸೇರಿಸಿ ಬಿ.ಎಸ್. ಯಡಿಯೂರಪ್ಪ ಜನ್ಮದಿನ ಆಚರಿಸುವುದು.
- ಮುಂದಿನ ವಿಧಾನಸಭಾ ಚುನಾವಣೆಯವರೆಗೆ ಬಿ.ವೈ. ವಿಜಯೇಂದ್ರ ಅವರನ್ನು ಅಧ್ಯಕ್ಷರನ್ನಾಗಿ ಮುಂದುವರೆಸುವುದು.
- ಹೊಸದಿಲ್ಲಿಗೆ ತೆರಳಿ ಬಿಎಸ್‌ವೈ ಜನ್ಮದಿನಕ್ಕೆ ರಾಷ್ಟ್ರೀಯ ನಾಯಕರನ್ನು ಆಹ್ವಾನಿಸುವುದು.
- ಸಭೆಯಲ್ಲಿ ಭಾಗವಹಿಸಿದ 60ಕ್ಕೂ ಮಾಜಿ ಶಾಸಕರಿಗೆ ಮುಂದಿನ ದಿನಗಳಲ್ಲಿ ಉತ್ತಮ ಸ್ಥಾನಗಳನ್ನು ಕಲ್ಪಿಸುವುದು.

### ಸಭೆಗೆ ಮುನ್ನ ದೇವಸ್ಥಾನಗಳ ಭೇಟಿ

ಬಿಜೆಪಿ ಮಾಜಿ ಸಚಿವರು, ಶಾಸಕರು ಸಭೆಗೂ ಮುನ್ನ ರೇಣುಕಾಚಾರ್ಯ ನೇತೃತ್ವದಲ್ಲಿ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನಕ್ಕೆ ಭೇಟಿ ನೀಡಿದರು. ಈ ವೇಳೆ ಕಾರ್ಯಕರ್ತರು ಪಟಾಕಿ ಸಿಡಿಸಿ, ಬಿಜೆಪಿ ನಾಯಕರನ್ನು ಸ್ವಾಗತಿಸಿದರು.

ದುರ್ಗಾಂಬಿಕಾ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ನಾಯಕರು, ನಂತರ ಬಾತಿ ರೇವಣಸಿದ್ದೇಶ್ವರ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ, ಖಾಸಗಿ ಹೋಟೆಲ್‌ಗೆ ಆಗಮಿಸಿ ಸಭೆ ನಡೆಸಿದರು.

# ರಾಣೇಬೆನ್ನೂರು : ಶೀಘ್ರ ನಗರ ಸಾರಿಗೆ ಪ್ರಾರಂಭ



**ಶಾಸಕ ಪ್ರಕಾಶ ಕೋಳಿವಾಡ**

ರಾಣೇಬೆನ್ನೂರು, ಡಿ. 15 - ನಗರದ ಬಡ ಜನತೆಗೆ ನಗರ ಸಾರಿಗೆ ಅವಶ್ಯವಿದೆ. ಜೊತೆಗೆ ಆಟೋ ಓಡಿಸುವ ಬಡವರ ಹಿತ ಕಾಪಾಡುವುದೂ ಸಹ ಅವಶ್ಯವಿದೆ. ಹಾಗಾಗಿ ಅಧಿಕಾರಿಗಳು ಸೇರಿದಂತೆ ಎಲ್ಲರ ಜೊತೆ ಚರ್ಚಿಸಿ ಶೀಘ್ರದಲ್ಲಿ ನಗರ ಸಾರಿಗೆ ಪ್ರಾರಂಭಿಸುವ ಆಶಯ ನನ್ನದಾಗಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ಇಂದು ನಗರಕ್ಕೆ ತರಲಾದ ರಾಜ್ಯ ಸಾರಿಗೆಯ ಎರಡು ಹೊಸ ಬಸ್‌ಗಳಿಗೆ ಪೂಜೆ ಸಲ್ಲಿಸಿ ಚಾಲನೆಗೆ ಹಸಿರು ನಿಶಾನೆ ತೋರಿಸಿ, ಪತ್ರಿಕೆಯವರ ಜೊತೆ ಮಾತನಾಡಿದರು.

ದಾವಣಗೆರೆ ಜನ ಸಂಖ್ಯೆ 8 ಲಕ್ಷದಷ್ಟಿದೆ, ಅಲ್ಲಿ ನಗರ ಸಾರಿಗೆ ಜೊತೆಗೆ ಆಟೋದವರಿಗೂ ಆದಾಯ ಸಿಗಲಿದೆ. ಆದರೆ ರಾಣೇಬೆನ್ನೂರು ನಗರದ ಜನ ಸಂಖ್ಯೆಯು 2 ಲಕ್ಷಕ್ಕೂ ಕಡಿಮೆ ಇದೆ. ಹೀಗಾಗಿ ಆಟೋದವರ ಹಿತ ರಕ್ಷಣೆ ಅವಶ್ಯವಿದೆ. ಎಲ್ಲರೊಡನೆ ಚರ್ಚಿಸಿ ನಗರ ಸಾರಿಗೆಗೆ ಆದ್ಯತೆ ಕೊಡುವದಾಗಿ ಶಾಸಕ ಪ್ರಕಾಶ ಕೋಳಿವಾಡ ಸ್ಪಷ್ಟಪಡಿಸಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮಂಜನಗೌಡ ಪಾಟೀಲ, ನಗರಸಭೆ ಮಾಜಿ ಸದಸ್ಯ ಬಸವರಾಜ ಹುಚ್ಚಗೊಂಡರ, ಗುರುರಾಜ ಕಂಬಳಿ, ಸಾರಿಗೆ ಮ್ಯಾನೇಜರ್ ಪ್ರಶಾಂತ ಸಂಗ್ರೇಶಿ, ಕಂಟ್ರೋಲರ್ ಉಮೇಶ ನಾಯಕ, ಇರ್ಫಾನ್ ದಿಡಗೂರ, ಮತ್ತಿತರರಿದ್ದರು.

# ರಾಷ್ಟ್ರೀಯ ಹಿರಿಯರ ಪಂದ್ಯಾವಳಿಗೆ ಎಸ್.ಎ.ಜಿ.ಬಿ. ವಿದ್ಯಾರ್ಥಿಗಳ ಆಯ್ಕೆ

ದಾವಣಗೆರೆ, ಡಿ. 15 - ನಗರದ ಎಸ್.ಎ.ಜಿ.ಬಿ. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಮಧು ನಾಯ್ಕ, ವಿನಯ್, ಸಂಜಯ್, ಮುರುಳೀಧರ ಮತ್ತು ಗಣೇಶ್ ಅವರುಗಳು ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ ರಾಜ್ಯ ಮಟ್ಟದ ಖುರುಷ್ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಪಡೆದು ಪಂಜಾಬ್‌ನ ಲೂಧಿಯಾನದಲ್ಲಿ ಇದೇ ದಿನಾಂಕ 23 ರಿಂದ 26ರ ವರೆಗೆ ನಡೆಯಲಿರುವ ರಾಷ್ಟ್ರೀಯ ಖುರುಷ್ ಪಂದ್ಯಾವಳಿಯಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾರೆ.

# ನಗರದಲ್ಲಿಂದು ಅಗ್ನಿಕುಂಡದ ಹರಕೆ

ಶ್ರೀ ಸ್ವಾಮಿ ಅಯ್ಯಪ್ಪ ಶಬರಿಮಲೈ ಸೇವಾ ಸಮಿತಿ ವತಿಯಿಂದ ಲೇಬರ್ ಕಾಲೋನಿ ಶ್ರೀ ಅಯ್ಯಪ್ಪ ಸ್ವಾಮಿ ದೀಪೋತ್ಸವ ಮತ್ತು ಮೆರವಣಿಗೆ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ.

ಇಂದು 5 ರಿಂದ 6-30ರ ವರೆಗೆ ಅಗ್ನಿಕುಂಡದ ಹರಕೆ ಅರ್ಪಿಸಲಾಗುತ್ತದೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ನಿಬಗೂರು ತಿಳಿಸಿದ್ದಾರೆ.

# ಅರ್ಚಕರ ವೃತ್ತಿ ಶಿಕ್ಷಣ ತರಬೇತಿ ಶಿಬಿರ

ಮಂಡ್ಯ, ಡಿ.15- ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಹಾಗೂ ಕಾಲಭೈರವೇಶ್ವರ ಸಂಸ್ಕೃತ ವೇದಾಗಮ ಮಹಾವಿದ್ಯಾಲಯದ ವತಿಯಿಂದ ಇಲ್ಲಿನ ಶ್ರೀಗಿರಿ ತಪೋವನದಲ್ಲಿ ನಾಳೆ ದಿನಾಂಕ 16ರಿಂದ 26ರ ವರೆಗೆ ಉಚಿತ ರಾಜ್ಯ ಮಟ್ಟದ 17ನೇ ಅರ್ಚಕರ ವೃತ್ತಿ ಶಿಕ್ಷಣ ತರಬೇತಿ ಶಿಬಿರ ನಡೆಯಲಿದೆ.

14 ರಿಂದ 60 ವರ್ಷದೊಳಗಿನ ಎಲ್ಲರೂ ತರಬೇತಿ ಶಿಬಿರದಲ್ಲಿ ಭಾಗವಹಿಸ ಬಹುದು.

ವಿವರಕ್ಕೆ ಸಂಪರ್ಕಿಸಿ : 9481492311, 9886958585.

# ದುರ್ಗಾ ಪಡೆಯಿಂದ ಕಾನೂನು ಅರಿವು



**ಮಲೇಬೆನ್ನೂರು**

ಮಲೇಬೆನ್ನೂರು, ಡಿ.15- ಪಟ್ಟಣದ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲೆ ಹಾಗೂ ಬೀರಲಿಂಗೇಶ್ವರ ಕಾಲೇಜು, ಪ್ರೌಢಶಾಲೆ ಸೇರಿದಂತೆ ವಿವಿಧ ಶಾಲೆಗಳಲ್ಲಿ ದಾವಣಗೆರೆ ದುರ್ಗಾ ಪಡೆಯ ಪಿಎಸ್ಐ ಪ್ರಮೀಳ ಅವರು ಸಾರ್ವಜನಿಕರಿಗೆ ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಕಾನೂನು ಮತ್ತು ಸುರಕ್ಷತೆ ಬಗ್ಗೆ ಅರಿವು ಮೂಡಿಸಿದರು.


**Commercial Property for Rent**
2300 Sq.Ft. for Shops, Banks, Office
Old Hospital Road.
Contact :
Mob : 81399 99033

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್ ಹತ್ತಿರ
22 1/2x40, 22 1/2x40
South ವಿದ್ಯಾನಗರ, ಕೆನರಾ ಬ್ಯಾಂಕ್ ಹತ್ತಿರ, ಕಾರ್ನರ್ ಸೈಟ್ ಇದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 40x70 ಪೂರ್ವ, ಜೈನ್ ಸ್ಕೂಲ್ ಹಿಂಭಾಗದಲ್ಲಿ 30x55 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ, 35x50 ಉತ್ತರ-ಪಶ್ಚಿಮ ಕಾರ್ನರ್, 40x70 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್ ಮಾರಾಟಕ್ಕಿದೆ**
ಶಿವ-ಪಾರ್ವತಿ ಬಡಾವಣೆಯಲ್ಲಿ
30x50, ದಕ್ಷಿಣ
ಸೈಟ್ ಮಾರಾಟಕ್ಕಿದೆ.
70265 83333

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ರಿಸಪ್ಷನಿಸ್ಟ್ (Receptionist) ಬೇಕಾಗಿದ್ದಾರೆ.
(ಯುವತಿ / ಮಹಿಳೆ)
ಆಸಕ್ತರು ಸಂಪರ್ಕಿಸಿ :
ಅಥರ್ವ ಎಂಟರ್‌ಪ್ರೈಸಸ್
1ನೇ ಕ್ರಾಸ್, ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
76765 59669

**ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ ಶಿಲ್ಪ ಡಯಾಗ್ನೋಸ್ಟಿಕ್ ಪಕ್ಕದಲ್ಲಿ 780 ಚದುರಡಿ ಜಾಗ ಬಾಡಿಗೆಗೆ ಇದೆ.
92439 61523

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ Last Bustop ದೇವಿ ಬನಶಂಕರಿ ಲೇಔಟ್‌ನಲ್ಲಿ 40x45 East, 30x40 West, 30x57 East, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆ ಬರುವಂತಹ ಕಮರ್ಷಿಯಲ್ ಮಳಿಗೆಗಳು ಮಾರಾಟಕ್ಕಿವೆ**
ಸಿತಾರ ಬಾರ್ ಪಕ್ಕದಲ್ಲಿ 23x24, 23x24 East ಅಕ್ಕ-ಪಕ್ಕ ಎರಡು ಮಳಿಗೆಗಳು.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕುಕ್ ಬೇಕಾಗಿದ್ದಾರೆ**
ದಾವಣಗೆರೆಯಿಂದ 18KM ದೂರದಲ್ಲಿರುವ ರೆಸ್ಟೋರೆಂಟ್‌ನಲ್ಲಿ Veg & Non Veg ಹಾಗೂ ತಂದೂರಿ ರೋಟಿ ಮಾಡಲು ಕುಕ್ ಬೇಕಾಗಿದ್ದಾರೆ.
94483 38709
74830 48533

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ
ಕಠಾರೆ ಆಪ್ಟಿಕಲ್ಸ್ ಕಂ.
ಚರ್ಚ್ ರಸ್ತೆ, ದಾವಣಗೆರೆ.
93427 55314
9844981086

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
ಕೆಲಸದ ಸಮಯ : ಬೆ.9 ರಿಂದ ಸಂ. 8ರವರೆಗೆ
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ಸ್
ಲಾಯರ್ ರಸ್ತೆ, ಟಯರ್ ಅಂಗಡಿಗಳ ಹತ್ತಿರ, ದಾವಣಗೆರೆ.

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಮನೆ ಲೀಸ್‌ಗೆ ಇದೆ**
2BHK, 2nd Floor, ಗಣೇಶ ಲೇಔಟ್, KSRTC BUSTAND ಹತ್ತಿರ, ದಾವಣಗೆರೆ.
98800 56262

**HOUSE FOR RENT**
2 BHK, 1ST FLOOR HOUSE
Fully Furnsihed At
S.S Layout, A Block, Opp. Indoor Stadium, Davanagere.
98440 64565

**ಬೇಕಾಗಿದ್ದಾರೆ**
vodafone-idea ದಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಪ್ರಮೋಟರ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ : 12,500 ರಿಂದ 20,000 ರೂ.
96321 62204, 70264 45566
91410 05356

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಗಾರ್ಮೆಂಟ್ಸ್‌ಗೆ ಬೇಕಾಗುವ ಮಷೀನ್‌ಗಳು ಮಾರಾಟಕ್ಕಿವೆ**
ಹೈಸ್ಪೀಡ್ ಮಷೀನ್‌ಗಳು - 4
ಜಾಕ್ ಬಟನ್ ಮಷೀನ್ - 1
ಬಟನ್ ಹೋಲ್ ಮಷೀನ್ - 1
ಓವರ್‌ಲಾಕ್ ಮಷೀನ್ - 1
ಸಂಪರ್ಕಿಸಿ.
99723 61281

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
ಬಂಪರ್ ಡ್ರಾ ನಂಬರ್
172 - ಐಶ್ವರ್ಯ ಎಂ.
474 - ಯಶಸ್ವಿನಿ ಆರ್.
870 - ರಾಹುಲ್ ಮೆಹರ್
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಉದ್ಯೋಗ ಅವಕಾಶ**
ಟ್ಯಾಲಿ ಪ್ರೈಮ್ ಬಗ್ಗೆ ಮೂಲಭೂತ ಜ್ಞಾನ ಹೊಂದಿರುವ ಪುರುಷ ಅಭ್ಯರ್ಥಿಗೆ ಉದ್ಯೋಗ ಅವಕಾಶ.
ದಯವಿಟ್ಟು ಸಂಪರ್ಕಿಸಿ :
96117 66329

**ಮನೆ ಮಾರಾಟಕ್ಕಿದೆ**
ನೂತನವಾಗಿ ಕಟ್ಟಿಸಿರುವ ಹೊಸ ಮನೆ ಮಾರಾಟಕ್ಕಿದೆ.
ಡುಪ್ಲೆಕ್ಸ್ ಮನೆ, ಎಸ್.ಎಸ್. ಲೇಔಟ್ ದಾವಣಗೆರೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
99806 47014

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಕಮರ್ಷಿಯಲ್ ಜಾಗ ಬಾಡಿಗೆಗಿದೆ**
ಮೊದಲನೇ ಮಹಡಿ
ಎಂಸಿಸಿ ಬಿ ಬ್ಲಾಕ್, 7ನೇ ಕ್ರಾಸ್, 9ನೇ ಮೇನ್, ಬಾಯ್ಸ್ ಹಾಸ್ಟೆಲ್ ರಸ್ತೆ, ದಾವಣಗೆರೆ.
82177 72482

**ಮನೆ ಬಾಡಿಗೆ / ಲೀಸ್‌ಗೆ**
1 BHK High tech extn.
2nd Block, 4th Cross,
SS Hospital Road,
ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘದ ಹತ್ತಿರ.
99641 10489 ಮಂಜಪ್ಪ ಹೆಚ್.

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**ಮಳಿಗೆ ಬಾಡಿಗೆಗೆ ಇದೆ**
ಗಡಿಯಾರ ಕಂಬದ ಎದುರು ವಸಂತ ಟಾಕೀಸ್ ರಸ್ತೆಯ ಕಾರ್ನರ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 1 ಹಾಗೂ ಫಸ್ಟ್ ಫ್ಲೋರ್‌ನಲ್ಲಿ 3, ಸೆಕೆಂಡ್ ಫ್ಲೋರ್‌ನಲ್ಲಿ 3 ಮಳಿಗೆ ಹಾಗೂ ಥರ್ಡ್ ಫ್ಲೋರ್‌ನಲ್ಲಿ 3 ರೂಂ ಬಾಡಿಗೆಗೆ ಇವೆ. ಮಳಿಗೆ ಅಳತೆ : 10x21
98444 76185
98445 00114

**ನೇತ್ರ ದಾನ ಶ್ರೇಷ್ಠ ದಾನ**

**ಹುಡುಗರು ಬೇಕಾಗಿದ್ದಾರೆ**
ಕಬ್ಬೂರ್ ಫರ್ನಿಚರ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಅನುಭವ ಮತ್ತು ವಿದ್ಯಾರ್ಹತೆ ಅವಶ್ಯಕತೆ ಇರುವುದಿಲ್ಲ. ಸಂಪರ್ಕಿಸಿ :
ಕಬ್ಬೂರ್ ಫರ್ನಿಚರ್ಸ್
ಪಿ.ಬಿ. ರಸ್ತೆ, ದಾವಣಗೆರೆ, ಸುಲ್ತಾನ್ ಜ್ಯೂವೆಲರ್ಸ್ ಹತ್ತಿರ, ದಾವಣಗೆರೆ.
89519 16300

**ಬೇಕಾಗಿದ್ದಾರೆ**
ರೈಸ್ ಮಿಲ್‌ನಲ್ಲಿ ಕೆಲಸ ಮಾಡಲು ನುರಿತ ಮಿಲ್ ಆಪರೇಟರ್ ಹಾಗೂ ಡ್ರೈಯರ್ ಆಪರೇಟರ್ ಬೇಕಾಗಿದ್ದಾರೆ. ಸಂಪರ್ಕಿಸಿ :
96065 69596, 97400 76554

**ಹೋಂ ನರ್ಸಿಂಗ್ ಸರ್ವೀಸ್**
ಹೆಲ್ತ್‌ಕೇರ್ ಮಹಿಳೆಯರು ಮತ್ತು ಪುರುಷರಿಗೆ ಸ್ನಾನ, ಡೈಪರ್ ಚೇಂಜ್, ವಾಕ್ 1/2 ಗಂಟೆ 1, 2 ಗಂಟೆ ಕೆಲಸಕ್ಕೆ ಬೇಕಾಗಿದ್ದಾರೆ. ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಕೆಲಸಕ್ಕೆ ಸಿಗುತ್ತಾರೆ. ಬೇಕಾದವರು ಕರೆ ಮಾಡಿ. ವಯಸ್ಸಾದ ಜೆಂಟ್ಸ್ ಲೇಡಿಸ್ ಇವರಿಗೆ ಬೇಕಾದರೆ ಕರೆ ಮಾಡಿ. ಕೆಲಸಕ್ಕೆ ಬೇಕಾದರೆ ಈ ನಂಬರಿಗೆ ಕರೆ ಮಾಡಿ.
ಶಿಲ್ಪಾ 91644 93271

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**ಗೋಡೌನ್ ಮತ್ತು ಮಳಿಗೆಗಳು ಬಾಡಿಗೆಗೆ ಇವೆ**
ದಾವಣಗೆರೆ APMC ಸೈಟ್ ನಂ. 20 'F' ಬ್ಲಾಕ್‌ನಲ್ಲಿ ಕಾರ್ನರ್ ಸೈಟ್ ಮಳಿಗೆ : 22x10, 22x10, 22x22, 28x22 ಮತ್ತು ಗೋಡೌನ್ 84x28 ಎತ್ತರ 30 ಅಡಿ ಬಾಡಿಗೆಗೆ ಇವೆ. ಸಂಪರ್ಕಿಸಿ :
98866 74409, 94489 29493

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮನೆ ಲೀಜ್‌ಗಿದೆ**
# 3100/51, ನೂತನ್ ಕಾಲೇಜ್ ರಸ್ತೆ, 7ನೇ ಮುಖ್ಯರಸ್ತೆ, 34ನೇ ವಾರ್ಡ್, 7ನೇ C ಶಿವಶಕ್ತಿ ಬ್ಲಾಕ್, ಅಳತೆ 30x50 ಅಡಿ, ವಿವೇಕಾನಂದ ಬಡಾವಣೆ, ದಾವಣಗೆರೆ ಉತ್ತರಾಭಿಮುಖ, 1ನೇ ಮಹಡಿ ಡಬಲ್ ಬೆಡ್ ರೂಂ, 2ನೇ ಮಹಡಿ, 3 ಬೆಡ್ ರೂಂ ಮನೆ ಮುನ್ಸಿಪಲ್/ಬೋರ್‌ವೆಲ್ ಇದೆ.
95387 32909, 98444 56243

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**JOB OPPORTUNITY**
Female Office Assistant
Good In Office Work-Computer Skills
Good In Customer Dealing Freshers can also apply B.Com., M.Com., & MBA
Cor Contact :
97312 18567
Send C.V-hardsoftdvg@gmail.com

**ಬೇಕಾಗಿದ್ದಾರೆ**
ಸೂಪರ್ ಮಾರ್ಟ್‌ನಲ್ಲಿ ಕೆಲಸಕ್ಕೆ 4 ಜನ ಯುವಕರು ಬೇಕಾಗಿದ್ದಾರೆ. ಸಂಪರ್ಕಿಸಿ.
ಎಸ್.ಎಸ್. ಸೂಪರ್ ಮಾರ್ಟ್
ಹೈಟೆಕ್ ಹಾಸ್ಪಿಟಲ್ ರಸ್ತೆ, ಕಾಳಿದಾಸ ಸರ್ಕಲ್ ಹತ್ತಿರ, ದಾವಣಗೆರೆ.
98441 07062

**WANTED**
Male Salesmen Part-Time / Full-Time
At The Jockey Exclusive Showroom Contact :
98867 57688

# ಗ್ರಾಮಗಳಿಗೆ ಭೇಟಿ ನೀಡಿದ ಜಿಲ್ಲಾಡಳಿತ : ಗ್ರಾಮಸ್ಥರ ಸಮಸ್ಯೆಗಳಿಗೆ ಪರಿಹಾರ

## ಸಂಸದರಾದ ಪ್ರಭಾ ಮಲ್ಲಿಕಾರ್ಜುನ್ ನಿರ್ದೇಶನದನ್ವಯ ಜಗಳೂರು ತಾಲ್ಲೂಕಿನಲ್ಲಿ ಸಮಸ್ಯೆಗಳನ್ನು ಆಲಿಸಿದ ಜಿಲ್ಲಾಡಳಿತ

ಜಗಳೂರು, ಡಿ. 15 - ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಸೂಚನೆ ಮೇರೆಗೆ ದಾವಣಗೆರೆ ಜಿಲ್ಲಾಡಳಿತ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಸ್ಥರ ಸಮಸ್ಯೆಗಳಿಗೆ ಪರಿಹಾರ ನೀಡಿತು.

ಕಳೆದ ವಾರ ಜಗಳೂರು ತಾಲ್ಲೂಕಿನ ಸಂಗೇನಹಳ್ಳಿ ಕೆರೆಗೆ ಬಾಗಿನ ಅರ್ಪಿಸಲು ತೆರಳಿದ ವೇಳೆ ಕಲ್ಲೇದೇವರಪುರ, ಸಂಗೇನಹಳ್ಳಿ, ಬೆಣ್ಣೆಹಳ್ಳಿ, ಬಸಪ್ಪನಹಟ್ಟಿ, ಗೌರಮ್ಮನಹಟ್ಟಿ ಗ್ರಾಮಗಳ ಗ್ರಾಮಸ್ಥರು 10ಕ್ಕೂ ಹೆಚ್ಚು ಸಮಸ್ಯೆಗಳನ್ನು ಸಂಸದರ ಬಳಿ ಹೇಳಿಕೊಂಡರು.

ಈ ಸಮಸ್ಯೆಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿದ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ಅವರೊಂದಿಗೆ ಮಾತನಾಡಿ ಕಲ್ಲೇದೇವರಪುರ, ಸಂಗೇನಹಳ್ಳಿ, ಬೆಣ್ಣೆಹಳ್ಳಿ, ಬಸಪ್ಪನಹಟ್ಟಿ, ಗೌರಮ್ಮನಹಟ್ಟಿ ಗ್ರಾಮಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಪರಿಹರಿಸುವಂತೆ ಸೂಚನೆ ನೀಡಿದರು.



ಕಲ್ಲೇದೇವರಪುರ, ಸಂಗೇನಹಳ್ಳಿ, ಬೆಣ್ಣೆಹಳ್ಳಿ, ಬಸಪ್ಪನಹಟ್ಟಿ, ಗೌರಮ್ಮನಹಟ್ಟಿ ಗ್ರಾಮಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ಅವರುಗಳು ಸಂಗೇನಹಳ್ಳಿ ಕೆರೆಯ ಸುತ್ತ ಸ್ವಚ್ಛತೆಗೆ ಚಾಲನೆ ನೀಡಿದರು.

ನಂತರ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಕಲ್ಲೇದೇವರಪುರ, ಸಂಗೇನಹಳ್ಳಿ, ಬೆಣ್ಣೆಹಳ್ಳಿ, ಬಸಪ್ಪನಹಟ್ಟಿ, ಗೌರಮ್ಮನಹಟ್ಟಿ ಗ್ರಾಮಗಳ ಬಳಿ ಬಾಕ್ಸ್ ಚರಂಡಿಗಳನ್ನು ನಿರ್ಮಿಸುವಂತೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಿ ಹೆದ್ದಾರಿ ಪಕ್ಕದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಬಾಕ್ಸ್ ಚರಂಡಿ ನಿರ್ಮಿಸುವಂತೆ ಜಿಲ್ಲಾಧಿಕಾರಿ ಮತ್ತು ಸಿಇಒ ಸುರೇಶ್ ಇಟ್ನಾಳ್ ಸೂಚಿಸಿದರು.

ಕಲ್ಲೇದೇವರಪುರ ಗ್ರಾಮದಲ್ಲಿನ ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಿಸಲು ಸೂಚನೆ ನೀಡಿದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಆಗಮಿಸಿ ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಿಸಿದರು. ಸಂಗೇನಹಳ್ಳಿ ಗ್ರಾಮದ ಶಾಲಾ ಕೊಠಡಿ ದುರಸ್ತಿ ಮತ್ತು ಸೇತುವೆ ನಿರ್ಮಾಣ ಮಾಡಲು ಹಾಗೂ ಕಲ್ಲೇದೇವರಪುರ ಗ್ರಾಮದ ಸುಪ್ರಸಿದ್ಧ ಶ್ರೀ ಕಲ್ಲೇಶ್ವರ ಸ್ವಾಮಿ ದೇವಸ್ಥಾನ ದುರಸ್ತಿಗೆ ಸ್ವಲ್ಪ ಸಮಯಾವಕಾಶವನ್ನು ಬಗ್ಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ಅವರು ಕೋರಿ, ಆದಷ್ಟು ಶೀಘ್ರ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

ನಂತರ ಸ್ಥಳದಿಂದಲೇ ಸಂಸದರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ಅವರು ಗ್ರಾಮಸ್ಥರ ಸಮಸ್ಯೆಗಳನ್ನು ಪರಿಹಾರ ಮಾಡಿರುವ ಬಗ್ಗೆ ತಿಳಿಸಿದಾಗ, ಸಂಸದರು ಸಂಗೇನಹಳ್ಳಿ ಕೆರೆಯನ್ನು ಪ್ರವಾಸಿ ತಾಣವನ್ನಾಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ಅವರೊಂದಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಶಿವಮೂರ್ತಿ, ಜಗಳೂರು ತಹಶೀಲ್ದಾರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ಬೆಸ್ಕಾಂ ಅಧಿಕಾರಿಗಳು ಸೇರಿದಂತೆ, ವಿವಿಧ ಇಲಾಖೆ ಅಧಿಕಾರಿಗಳು, ಅಧ್ಯಕ್ಷೆ ವಸಂತ ಕುಮಾರಿ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಸೂರಪ್ಪ, ಮುಖಂಡ ಕೊಟ್ಟಿಗೆ ತಿಪ್ಪೇಸ್ವಾಮಿ ಸೇರಿದಂತೆ ಹಲವರಿದ್ದರು.

## ನಗರದಲ್ಲಿ ನಾಳೆ ಕದಳಿ ಮಹಿಳಾ ವೇದಿಕೆ ಸಭೆ

ದಾವಣಗೆರೆ, ಡಿ.15- ನಗರದ ಕದಳಿ ಮಹಿಳಾ ವೇದಿಕೆಯ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ನಾಡಿದ್ದು ದಿನಾಂಕ 17ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಶಾಮನೂರು ಶಿವಶಂಕರಪ್ಪ ತರಳಬಾಳು ಸಭಾ ಭವನದಲ್ಲಿ ನಡೆಸಲಾಗುವುದು.

ಇದೇ ಸಂದರ್ಭದಲ್ಲಿ ನಡೆಯುವ 160ನೇ ಕಮ್ಮಟದಲ್ಲಿ ಶರಣ ಮಾದಾರ ಚೆನ್ನಯ್ಯ ಮತ್ತು ಶರಣ ಒಕ್ಕಲಿಗರ ಮುದ್ದಣ್ಣ ಸ್ಮರಣೆ, ಆರೋಗ್ಯ ಜಾಗೃತಿ ಹಾಗೂ ಸದಸ್ಯರಿಗೆ ವಿವಿಧ ಆಟಗಳನ್ನು ಏರ್ಪಡಿಸಲಾಗಿದೆ.

ಸುನಂದಮ್ಮ ಕೆ.ಆರ್. ಜಯದೇವಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಗಾಯತ್ರಿ ವಸ್ತ್ರದ್ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಡಾ. ಸುಷ್ಮಾ ನಾಡಗೌಡ ಉಪಸ್ಥಿತರಿದ್ದು, ಸರ್ವಿಕಲ್ ಕ್ಯಾನ್ಸರ್ ಮತ್ತು ಬ್ರೆಸ್ಟ್ ಕ್ಯಾನ್ಸರ್ ವಿಷಯವಾಗಿ ಉಪನ್ಯಾಸ ನೀಡಲಿದ್ದಾರೆ ಎಂದು ಕಾರ್ಯದರ್ಶಿ ಚಂದ್ರಿಕಾ ಮಂಜುನಾಥ್ ತಿಳಿಸಿದರು.

## ತತ್ವ ಶಾಲೆಯಲ್ಲಿ ಮಾತೃ ಭೋಜನ



ದಾವಣಗೆರೆ, ಡಿ.15- ನಗರದ ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ತತ್ವ ಶಾಲೆಯಲ್ಲಿ ಮಾತೃ ಭೋಜನ ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮಕ್ಕಳಿಗೆ ತಾಯಂದಿರು ಕೈತುತ್ತು ನೀಡಿದರು. ಈ ಕಾರ್ಯಕ್ರಮದಲ್ಲಿ ವೈದ್ಯರಾದ ರೂಪ ಶ್ರೀ ಶಶಿಕಾಂತ್ ಅವರು ಮಾತೃ ಭೋಜನದ ಮಹತ್ವವನ್ನು ತಿಳಿಸಿಕೊಟ್ಟರು.

## ಸ್ವದೇಶಿ ಮೇಳದಲ್ಲಿ ಸೌಭಾಗ್ಯವತಿ ಉಡುಗೊರೆ ಪಡೆದ ಸುಮಾ ಬೇತೂರು



ದಾವಣಗೆರೆ, ಡಿ.15- ಸ್ವದೇಶಿ ಜಾಗರಣ ಮಂಚ್ ವತಿಯಿಂದ ನಗರದ ಹೈಸ್ಕೂಲ್ ಮೈದಾನದಲ್ಲಿ ನಡೆಯುತ್ತಿರುವ ಸ್ವದೇಶಿ ಮೇಳದಲ್ಲಿ ಪ್ರತಿನಿತ್ಯ ಭೇಟಿ ನೀಡುವ ಮಹಿಳೆಯರಿಗೆ ಸೌಭಾಗ್ಯವತಿ ಉಡುಗೊರೆ ನೀಡಲಾಗುತ್ತಿದೆ.

ಭಾರತೀಯ ಪಾರಂಪರಿಕ ಉಡುಗೆಯಾದ ಸೀರೆಯುಟ್ಟು ಬರುವ ಮಹಿಳೆಯರಿಗೆ ಲಕ್ಕಿ ಡಿಪ್ ಮುಖಾಂತರ ಸೀರೆಯನ್ನು ಬಿ.ಎಸ್. ಚನ್ನಬಸಪ್ಪ ಅಂಡ್ಸ್ ಸನ್ಸ್ ಇವರು ಉಡುಗೊರೆಯಾಗಿ ನೀಡುತ್ತಾರೆ.

ಲಕ್ಕಿ ಡಿಫ್‌ನಲ್ಲಿ ಎಲೆಬೇತೂರು ಗ್ರಾಮದ ಶ್ರೀಮತಿ ಸುಮಾ ಮಾಳಿಗೇರ ಬಸವಂತಪ್ಪ ಇವರು ಪಡೆದುಕೊಂಡಿರುತ್ತಾರೆ. ಲಕ್ಕಿ ಡಿಪ್ ಸೌಭಾಗ್ಯವತಿ ಉಡುಗೊರೆ ಸೀರೆಯ ಕೂಪನ್ನನ್ನು ಸ್ವದೇಶಿ ಮೇಳದ ಸಂಘಟಕರಾದ ಎಸ್.ಟಿ. ವೀರೇಶ್ ದಂಪತಿಗಳಿಗೆ ನೀಡಿದ್ದಾರೆ.

## ಲಿಂಗದಹಳ್ಳಿಯಲ್ಲಿ ವಿದ್ಯಾರ್ಥಿಗಳ ಸಾವು : ಶಿಕ್ಷಕರಿಗೆ ಕಾಂಪೌಂಡ್ ಕಟ್ಟಿಸುವ ಹೊಣೆಗಾರಿಕೆ

ರಾಣೇಬೆನ್ನೂರು, ಡಿ. 15- ಇತ್ತೀಚೆಗೆ ಹೊಳೆಯಲ್ಲಿ ಈಜಾಡಲು ಹೋಗಿದ್ದ ಗ್ರಾಮದ ರಾಕೇಶ ಕೋಲೇರ ಹಾಗೂ ಸಂತೋಷ ಚನ್ನಗೌಡ್ರ ಈ ಇಬ್ಬರು ವಿದ್ಯಾರ್ಥಿಗಳು ಶಿಕ್ಷಕರ ಬೇಜವಾಬ್ದಾರಿಯಿಂದಾಗಿ ಸಾವನ್ನಪ್ಪಿದ್ದು, ಕಾರಣ ಶಿಕ್ಷಕರೇ ಹಣ ಖರ್ಚು ಮಾಡಿ ಶಾಲಾ ಕಾಂಪೌಂಡ್ ನಿರ್ಮಿಸಿ, ಗೇಟ್ ಸರಿಪಡಿಸುವಂತೆ ಹೊಣೆಗಾರಿಕೆಯನ್ನು ಗ್ರಾಮಸ್ಥರು ವಿಧಿಸಿದ್ದಾರೆಂದು ಗೊತ್ತಾಗಿದೆ.

ಶಿಕ್ಷಣ ಇಲಾಖೆ ಅಧಿಕಾರಿಗಳ ಸಮಕ್ಷಮದಲ್ಲಿ ಎಸ್‌ಡಿಎಂಸಿ, ಗ್ರಾ.ಪಂ. ಸದಸ್ಯರ ಹಾಗೂ ಗ್ರಾಮದ ಹಿರಿಯರು ನಡೆಸಿದ ಸಭೆಯಲ್ಲಿ, ಶಾಲೆಯ ತರಗತಿಗಳು ನಡೆಯುತ್ತಿದ್ದಾಗ ಈ ಬಾಲಕರು ಗ್ರಾಮದಲ್ಲಿ ಹರಿಯುತ್ತಿರುವ ಕುಮದ್ವತಿ ನದಿಗೆ ತೆರಳಿದ್ದು, ಶಿಕ್ಷಕರ ಬೇಜವಾಬ್ದಾರಿತನ ಎನ್ನುವ ಆರೋಪ ಬಲವಾಗಿ ಕೇಳಿಬಂದಿದ್ದು, ಅವರ ಸಾವಿಗೆ ಶಿಕ್ಷಕರಿಗೆ ಈ ಶಿಕ್ಷೆ ವಿಧಿಸಲಾಗಿದೆ ಎಂದು ಹೇಳಲಾಗಿದೆ.

**ನೋಟಿಸು:** ಲಿಂಗದಹಳ್ಳಿಯಲ್ಲಿ ನಡೆದ ಬಾಲಕರ ಸಾವಿನ ಘಟನೆಗೆ ಕಾರಣ ಕೇಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಇಲಾಖೆ ನೋಟಿಸು ನೀಡಿದ್ದು, ತಾಲ್ಲೂಕಿನ ಎಲ್ಲ ಸರ್ಕಾರಿ ಶಾಲೆಯ ಶಿಕ್ಷಕರಿಗೂ ಸಹ ಮಕ್ಕಳ ಬಗ್ಗೆ ಕಾಳಜಿ ವಹಿಸುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿದುಬಂದಿದೆ.

## ನಿವೃತ್ತ ನೌಕರರಿಂದ ಬೆಳಗಾವಿಯಲ್ಲಿ ಇಂದು ಪ್ರತಿಭಟನೆ

ದಾವಣಗೆರೆ, ಡಿ.15- ನಿವೃತ್ತ ನೌಕರರಿಗೆ 7ನೇ ವೇತನ ಸೌಲಭ್ಯ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ನಿವೃತ್ತ ನೌಕರರ ವೇದಿಕೆಯಿಂದ ನಾಳೆ ದಿನಾಂಕ 16 ರಂದು ಬೆಳಗಾವಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಸಮಿತಿಯ ರಾಜ್ಯ ಸಂಚಾಲಕ ಡಿ. ಆನಂದಪ್ಪ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 01-07-2022 ರಿಂದ 31-07-2024 ರ ಅವಧಿಯಲ್ಲಿ ನಿವೃತ್ತ ಸರ್ಕಾರಿ ನೌಕರರರಾದ ನಾವುಗಳು 7ನೇ ವೇತನ ಆಯೋಗದ ಅವಧಿಯ ಲ್ಲಿಯೇ ಸೇವೆ ಸಲ್ಲಿಸಿದ್ದೇವೆ. ಹಾಗಾಗಿ 7ನೇ ವೇತನ ಆಯೋಗದ ಲೆಕ್ಕಾಚಾರದಲ್ಲಿಯೇ ಪರಿಷ್ಕೃತ ಆದೇಶ ಹೊರಡಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

ಈ ಅವಧಿಯಲ್ಲಿ 26,423 ನಿವೃತ್ತ ನೌಕರರಿದ್ದು, ಇವರಿಗೆ 7ನೇ ವೇತನ ಆಯೋಗದ ಅನುಷ್ಠಾನದಲ್ಲಿ ನಿವೃತ್ತಿ ಸೌಲಭ್ಯವನ್ನು ನೀಡದೇ 6ನೇ ವೇತನ ಆಯೋಗದ ಲೆಕ್ಕಾಚಾರದಲ್ಲಿ ನೀಡಿರುವುದರಿಂದ 'ಎ' ದರ್ಜೆಯಿಂದ 'ಡಿ' ದರ್ಜೆ ನೌಕರರಿಗೆ 6ರಿಂದ 22 ಲಕ್ಷದ ವರೆಗೆ ಆರ್ಥಿಕ ನಷ್ಟವಾಗಿದೆ ಎಂದು ತಮ್ಮ ಅಳಲು ತೋಡಿದರು.

ರಾಜ್ಯ ಸಂಚಾಲಕ ಮಂಜುನಾಥ ರೆಡ್ಡಿ ಮಾತನಾಡಿ, 7ನೇ ವೇತನ ಆಯೋಗದ ವರದಿಯಂತೆ ಪರಿಷ್ಕೃತ ವೇತನದ ಮೇಲೆ ನಿವೃತ್ತಿ ಆರ್ಥಿಕ ಸೌಲಭ್ಯಗಳಾದ ಡಿಸಿಆರ್‌ಜಿ, ಕಮ್ಯುಟೇಶನ್ ಹಾಗೂ ಗಳಿಕೆ ರಜೆ ನಗದೀಕರಣಗಳ ಸೌಲಭ್ಯಗಳ ವ್ಯತ್ಯಾಸದ ಮೊತ್ತವನ್ನು ನೀಡುವಂತೆ ಆಗ್ರಹಿಸಿದರು.

ಈ ವೇಳೆ ಸಂಘಟನೆಯ ನಿವೃತ್ತ ಪಿಎಸ್‌ಐ ಏಕಾಂತಪ್ಪ, ನಿವೃತ್ತ ಎಎಸ್‌ಐ ನಾಗರಾಜ್, ಅಬ್ದುಲ್ ಸತ್ತಾರ್ ಸುದ್ದಿಗೋಷ್ಠಿಯಲ್ಲಿದ್ದರು.

## ನಗರದಲ್ಲಿ ನಾಳೆ ವಿಶ್ವಕರ್ಮ ಶ್ರೀ ಕಾಳಿಕಾದೇವಿ ಕಾರ್ತಿಕೋತ್ಸವ



ದಾವಣಗೆರೆ, ಡಿ.15- ಶ್ರೀ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 17 ರ ಮಂಗಳವಾರ ಶ್ರೀ ಕಾಳಿಕಾದೇವಿ ಕಡೇಕಾರ್ತಿಕೋತ್ಸವ ನಡೆಯಲಿದೆ. ಅಂದು ಬೆಳಗ್ಗೆ ಅಮ್ಮನವರಿಗೆ ವೇದೋಕ್ತ ಪಂಚಾಮೃತ ಅಭಿಷೇಕ, ವಿಶ್ವಕರ್ಮ ಅಷ್ಟೋತ್ತರ ಪೂಜೆ, ಪುಷ್ಪಾಲಂಕಾರ, ವಿಶೇಷ ಪೂಜಾ ಅಲಂಕಾರ, ಮಹಾಮಂಗಳಾರತಿ, ರಾತ್ರಿ 7.30ಕ್ಕೆ ದೀಪಾರಾಧನೆ ಕಡೇ ಕಾರ್ತಿಕೋತ್ಸವ ಏರ್ಪಡಿಸಲಾಗಿರುತ್ತದೆ.

## ಇಂದಿನಿಂದ ಆವರಗೊಳ್ಳ ಶ್ರೀಗಳಿಂದ ಧನುರ್ಮಾಸ ಪೂಜಾನುಷ್ಠಾನ



ದಾವಣಗೆರೆ ತಾಲ್ಲೂಕು ಶ್ರೀಕ್ಷೇತ್ರ ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳವರು ವಿಶ್ವಶಾಂತಿಗಾಗಿ, ಲೋಕಕಲ್ಯಾಣಕ್ಕಾಗಿ ಇಂದಿನಿಂದ ಜನವರಿ 15 ರವರೆಗೆ ಒಂದು ತಿಂಗಳ ಪರ್ಯಂತರ ತಮ್ಮ 30 ನೇ ವರ್ಷದ 'ಧನುರ್ಮಾಸ' ಪೂಜಾನುಷ್ಠಾನವನ್ನು ಹಮ್ಮಿಕೊಂಡಿರುತ್ತಾರೆ ಭಕ್ತರಿಗೆ ಯಥಾರೀತಿ ಸಾಯಂಕಾಲ ದರ್ಶನಾಶೀರ್ವಾದ ವಿರುತ್ತದೆ.

## ನಗರದ ಎಸ್‌ಬಿಸಿ ಕಾಲೇಜಿನಲ್ಲಿ ಇಂದು ವಿದ್ಯಾರ್ಥಿ ಸಂಘ ಉದ್ಘಾಟನೆ

ಎಸ್.ಬಿ.ಸಿ. ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದಲ್ಲಿ 2024-25ನೇ ಸಾಲಿನ ವಿದ್ಯಾರ್ಥಿ ಸಂಘ, ಸಾಂಸ್ಕೃತಿಕ, ಕ್ರೀಡಾ, ಎನ್.ಎಸ್.ಎಸ್. ಘಟಕ ಹಾಗೂ ರೆಡ್ ಕ್ರಾಸ್ ಘಟಕಗಳ ಉದ್ಘಾಟನಾ ಸಮಾರಂಭವನ್ನು ಇಂದು ಸೋಮವಾರ ಬೆಳಿಗ್ಗೆ 10.30ಕ್ಕೆ ಎಸ್.ಬಿ.ಸಿ. ಕಾಲೇಜಿನ ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ.

ಡಾ. ಅಥಣಿ ವೀರಣ್ಣ ಅಧ್ಯಕ್ಷತೆ ವಹಿಸುವರು. ಎಸ್ಪಿ ಉಮಾಪ್ರಶಾಂತ್ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ದುಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಬಿ.ಸಿ. ಉಮಾಪತಿ, ಎನ್.ಎ. ಮುರುಗೇಶ್, ಅಥಣಿ ಪ್ರಶಾಂತ್ ಉಪಸ್ಥಿತರಿರುವರು.

ಪ್ರಾಂಶುಪಾಲ ಡಾ. ಕೆ. ಷಣ್ಮುಖ ಪ್ರಸ್ತಾವಿಕ ನುಡಿಗಳನ್ನಾಡಲಿದ್ದಾರೆ.

## ಒಳ ಮೀಸಲಾತಿ : ಹಕ್ಕೊತ್ತಾಯ ಸಮಾವೇಶ

ದಾವಣಗೆರೆ, ಡಿ.15- ಸುಪ್ರೀಂ ಕೋರ್ಟಿನ ತೀರ್ಪಿನಂತೆ ಒಳ ಮೀಸಲಾತಿ ಜಾರಿಗೆ ಚಳಿಗಾಲದ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿ ಸಬೇಕೆಂದು ಆಗ್ರಹಿಸಿ ನಾಳೆ 16ರ ಸೋಮವಾರ ಬೆಳಗಾವಿಯಲ್ಲಿ ಬೃಹತ್ ಹಕ್ಕೊತ್ತಾಯ ಸಮಾವೇಶಕ್ಕೆ ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘ ಕರೆ ನೀಡಿದೆ.

ಈ ಕುರಿತಂತೆ ಇಲ್ಲಿನ ಶಾಸಕರುಗಳ ಮನೆ ಮುಂಭಾಗ ತಮಟೆ ಚಳುವಳಿ ನಡೆಸಿ ಒಳ ಮೀಸಲಾತಿ ಬಗ್ಗೆ ಚರ್ಚಿಸುವಂತೆ ಅವರಿಗೂ ಮನವಿ ಸಲ್ಲಿಸಿದ್ದೇವೆ ಎಂದು ಸಂಘದ ರಾಜ್ಯ ಉಪಾಧ್ಯಕ್ಷ ಆಲೂರು ನಿಂಗರಾಜ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುಪ್ರೀಂಕೋರ್ಟಿನ ಸಂವಿಧಾನ ಪೀಠವು ಆಗಸ್ಟ್ 1ರಂದು ಒಳ ಮೀಸಲಾತಿಯನ್ನು ಜಾರಿ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಿದರೂ ಈ ಬಗ್ಗೆ ಗಮನ ಹರಿಸದೆ ರಾಜ್ಯ ಸರ್ಕಾರ ಕಣ್ಮುಚ್ಚಿ ಕುಳಿತಿದೆ ಎಂದು ದೂರಿದರು.

ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಸರ್ಕಾರ ಒಳ ಮೀಸಲಾತಿ ಶಿಫಾರಸ್ಸು ಮಾಡುವ ನಿರ್ಧಾರ ಮಾಡಿತು. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರೂ ಬೆಂಬಲ ನೀಡಿದ್ದರು ಎಂದ ಹೇಳಿದರು.

ಹರಿಯಾಣದ ಬಿಜೆಪಿ ಸರ್ಕಾರವು ಸುಪ್ರೀಂಕೋರ್ಟಿನ ತೀರ್ಪು ಬಂದ ಮೊದಲ ವಾರದಲ್ಲೆ ಒಳ ಮೀಸಲಾತಿ ಜಾರಿ ಮಾಡಿದೆ. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಈ ಬದ್ಧತೆ ತೋರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಆಲೂರು ಬಸವರಾಜ್, ಎಂ. ಅಂಜಿನಪ್ಪ, ಹರೀಶ್ ಹೊನ್ನೂರು, ಬಿ. ಹಾಲೇಶ್, ಕೆ.ಹೆಚ್. ಅವಿನಾಶ್ ಮತ್ತು ದಲಿತ ಸಮಾಜದ ಮುಖಂಡರು ಇದ್ದರು.

## ಇಂದಿನಿಂದ ಬ್ರಹ್ಮೋತ್ಸವ

ಚಿತ್ರದುರ್ಗ ಮೆದೆಹಳ್ಳಿ ರಸ್ತೆಯಲ್ಲಿನ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಇಂದಿನಿಂದ ಇದೇ ದಿನಾಂಕ 21 ರವರೆಗೆ 25 ನೇ ವರ್ಷದ ಬ್ರಹ್ಮೋತ್ಸವ ಕಾರ್ಯಕ್ರಮ ಜರುಗಲಿದೆ.

ಕೇರಳದ ಪ್ರಧಾನ ಅರ್ಚಕರಾದ ವಿಷ್ಣು ಭಟ್ಟಾದಿ ಪಾಡ ತಂತ್ರಿಗಳು, ತ್ರಿಶೂರ್ ಹಾಗೂ ದೇವಸ್ಥಾನದ ಪ್ರಧಾನ ಅರ್ಚಕ ಸತೀಶ ಶರ್ಮ ಸಂಗಡಿಗರಿಂದ ಪೂಜೆ ನೆರವೇರಲಿದೆ.

ಪ್ರತಿ ದಿನ ಮಹಾ ಗಣಪತಿ ಹೋಮ, ಸುದರ್ಶನ ಹೋಮ, ಅಭಿಷೇಕ, ಉಷಾಂ ಪೂಜೆ, ನವಕಂ, ಪಂಚಗವ್ಯಂ, ಕಳಸ ಪೂಜೆ, ಹುಚ್ಚ ಪೂಜೆ,ಅಂಕುರಾ ಪೂಜೆ, ಮೊಳೆಪೂಜೆ, ದೀಪಾರಾಧನೆ, ಶ್ರೀ ಭೂತ ಬಲಿ, ಭಗವತಿ ಸೇವಾ, ಹತ್ತಾಳ ಪೂಜೆ, ಚತುಶುದ್ಧಿ, ದಾರ, ಪಂಚಗವ್ಯ, ಧ್ವಜಸ್ತಂಬ,ದಿನಾಂಕ 18 ರಂದು ಬುಧವಾರ ಸಂಜೆ 18 ಮೆಟ್ಟಿಲುಗಳ ಪಡಿ ಪೂಜಾ ಕಾರ್ಯಕ್ರಮ ನಡೆಯಲಿದೆ.

## ಆರೋಗ್ಯ ಜೀವನಕ್ಕೆ ಸ್ವಚ್ಛತೆ ಮುಖ್ಯ



ಹರಿಹರ

ಹರಿಹರ, ಡಿ.15- ಆರೋಗ್ಯಯುಕ್ತ ಜೀವನ ನಡೆಸಲು, ಮನೆಯ ಸುತ್ತಮುತ್ತಲಿನ ಜಾಗವನ್ನು ಸ್ವಚ್ಛವಾಗಿರಿಸಬೇಕು ಎಂದು ಆರೋಗ್ಯ ಇಲಾಖೆಯ ಶೈಲಜಾ ತಿಳಿಸಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಭೀಮ್ ನಗರ ಬಡಾವಣೆಯಲ್ಲಿ ಜ್ಞಾನವಿಕಾಸ ಹಾಗೂ ಸೃಜನಶೀಲ ಕಾರ್ಯಕ್ರಮದಡಿ ಹಸಿಕಸ, ಒಣಕಸ ವಿಲೇವಾರಿ ಮತ್ತು ವಿಂಗಡಣೆ ಸ್ವಚ್ಛತಾ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ನಮ್ಮ ಬಡಾವಣೆಯನ್ನು ಸ್ವಚ್ಛತೆಯಿಂದ ಇರಿಸಿಕೊಂಡರೆ ಎಲ್ಲರೂ ರೋಗದಿಂದ ದೂರವಿರಬಹುದು. ಆದ್ದರಿಂದ ಬಡಾವಣೆ ನಿವಾಸಿಗಳೆಲ್ಲರೂ ಹಸಿ ಮತ್ತು ಒಣ ಕಸವನ್ನು ಸರಿಯಾಗಿ ಬೇರ್ಪಡಿಸಿ, ನಗರಸಭೆ ಗಾಡಿಗೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ಗುತ್ತಿಗೆದಾರ ಜಗದೀಶ್ ಮಾತನಾಡಿದರು. ಇದೇ ವೇಳೆ 50 ಜನರಿಗೆ ಫಿನಾಯಿಲ್ ಮತ್ತು ಬ್ಲೀಚಿಂಗ್ ಪೌಡರ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಒಕ್ಕೂಟದ ಅಧ್ಯಕ್ಷೆ ರತ್ನಮ್ಮ, ಜ್ಞಾನವಿಕಾಸ ಸಮನ್ವಯಾಧಿಕಾರಿ ಆರ್. ಭಾರತಿ, ಸ್ಥಳೀಯ ಸೇವಾ ಪ್ರತಿನಿಧಿ ಸುಧಾ ಮತ್ತು ಸ್ವ-ಸಹಾಯ ಸಂಘ ಹಾಗೂ ಜ್ಞಾನವಿಕಾಸ ಕೇಂದ್ರದ ಸದಸ್ಯರು ಇದ್ದರು.

## ಯೋಗ ಸ್ಪರ್ಧೆ : ಸಂತೋಷ ಪ್ರಥಮ



ದಾವಣಗೆರೆ, ಡಿ.15- ಶಿವಮೊಗ್ಗ ನಗರದ ಡಿ.ವಿ.ಎಸ್ ರಂಗಮಂದಿರದಲ್ಲಿ ಈಚೆಗೆ ನಡೆದ 7ನೇ ರಾಷ್ಟ್ರಮಟ್ಟದ ಸಾಂಪ್ರದಾಯಿಕ ಯೋಗಾಸನ ಸ್ಪರ್ಧೆಯಲ್ಲಿ ನಗರದ ಡಿ. ಸಂತೋಷ ಅವರು ಪ್ರಥಮ ಬಹುಮಾನ ಪಡೆದಿದ್ದಾರೆ.

ನಗರದ ಸೋಮೇಶ್ವರ ವಿದ್ಯಾಲಯದ ಎಸ್. ಸೂರ್ಯ ಹಾಗೂ ರಾಷ್ಟ್ರೋತ್ಥಾನ ವಿದ್ಯಾಲಯದ ಕೆ. ರಕ್ಷಾ ತೃತೀಯ ಸ್ಥಾನ ಪಡೆದಿದ್ದಾರೆ.

## ಪ್ರೀಮಿಯರ್ ಲೀಗ್ ಕ್ರಿಕೆಟ್ ರಾಣೇಬೆನ್ನೂರು ರಾಷ್ಟ್ರಕೂಟ ಪ್ರಥಮ



ರಾಣೇಬೆನ್ನೂರು,ಡಿ.15- ಇಲ್ಲಿನ ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಏರ್ಪಡಿಸಲಾಗಿದ್ದ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ರಾಷ್ಟ್ರಕೂಟ ತಂಡವು ಪ್ರಥಮ ಸ್ಥಾನ ಹಾಗೂ ಕದಂಬ ತಂಡ ದ್ವಿತೀಯ ಸ್ಥಾನ ಪಡೆದುಕೊಂಡವು.

# ಕನ್ನಡ ನೆಲದಲ್ಲಿ ಅನ್ಯ ಭಾಷಿಗರಿಂದ ಅನ್ನ, ಹಕ್ಕು, ಉದ್ಯೋಗ, ಆಸ್ತಿ ಕಬಳಿಕೆ ಯತ್ನ

## ನಗರದಲ್ಲಿನ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಿಡಿಕಾರಿದ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ

ದಾವಣಗೆರೆ, ಡಿ. 15- ಬೆಂಗಳೂರು ನಗರದಲ್ಲಿ ಐಟಿ, ಬಿಟಿ, ಕಾರ್ಖಾನೆಗಳು ಸ್ಥಾಪನೆಯಾಗುತ್ತಲೇ ಇವೆ. ಆದರೆ ಆಯಾ ರಾಜ್ಯದ ಜನರಿಗೆ ಮಾತ್ರ ಉದ್ಯೋಗ ನೀಡುತ್ತಿದ್ದಾರೆ. ಈ ನೆಲದ ಮಕ್ಕಳಿಗೆ ಉದ್ಯೋಗ ನೀಡುವಂತಾಗಬೇಕು. ಈ ಬಗ್ಗೆ ಸರ್ಕಾರ ಗಂಭೀರ ಚಿಂತನೆ ಮಾಡಿ, ಕನ್ನಡ ನೆಲದಲ್ಲಿ ಕನ್ನಡಿಗರಿಗೆ ಉದ್ಯೋಗ ಕಲ್ಪಿಸುವ ವ್ಯವಸ್ಥೆ ಮಾಡಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ ಮನವಿ ಮಾಡಿದರು.

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ದಾವಣಗೆರೆ ಜಿಲ್ಲಾ ಘಟಕದ ವತಿಯಿಂದ 69 ನೇ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ 'ಸಾಂಸ್ಕೃತಿಕ ಸಂಭ್ರಮ', ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಕೆಂಪೇಗೌಡರು ಕಟ್ಟಿದ ಬೆಂಗಳೂರಿನಲ್ಲಿ ಅನ್ಯಭಾಷಿಗರ ಹಾವಳಿ ಹೆಚ್ಚಾಗಿದ್ದು, ನಮ್ಮ ಅನ್ನ, ನಮ್ಮ ಹಕ್ಕು, ನಮ್ಮ ಉದ್ಯೋಗ, ನಮ್ಮ ಆಸ್ತಿ ಕಿತ್ತುಕೊಳ್ಳುತ್ತಿದ್ದಾರೆ. ಆದರೆ ಸರ್ಕಾರ ಮಾತ್ರ ಮೌನವಹಿಸಿದೆ. ಸರೋಜಿನಿ ಮಹಿಷಿ ವರದಿ ಜಾರಿಗೆ ತರುತ್ತೇವೆ. ಶೇ. 60 ರಷ್ಟು ಕನ್ನಡಿಗರಿಗೆ ಉದ್ಯೋಗ ಕಲ್ಪಿಸಿಕೊಡುತ್ತೇವೆ ಎಂದು ಭರವಸೆ ನೀಡಿದ ಸರ್ಕಾರ, ಮುಖ್ಯಮಂತ್ರಿಗಳು ಯಾವುದೇ ಕ್ರಮಕ್ಕೆ ಮುಂದಾಗುತ್ತಿಲ್ಲ. ಈ ನೆಲದ ಮಕ್ಕಳಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ದಿಟ್ಟ ನಿರ್ಧಾರ ಕೈಗೊಳ್ಳಬೇಕಾಗಿದೆ. ಈ ಬಗ್ಗೆ ಸದನದಲ್ಲಿ ಘರ್ಜಿಸಬೇಕಾಗುತ್ತದೆ ಕಾರ್ಯಕ್ರಮದಲ್ಲಿ ಹಾಜರಿದ್ದ ಶಾಸಕ ಬಸವಂತಪ್ಪ ಅವರಲ್ಲಿ ಮನವಿ ಮಾಡಿದರು.

ಹಣವಂತರು, ಪ್ರಭಾವಿಗಳು ರಾಜಕಾರಣಕ್ಕೆ ಬರುತ್ತಾರೆ. ಆದರೆ ಜನಪರ, ನಾಡಿನ ಪರ ಕೆಲಸ ಮಾಡುವ ರಾಜಕಾರಣಿಗಳ ಅವಶ್ಯಕತೆ ಇದೆ. ಕನ್ನಡ ನೆಲದ ಮರಾಠಿಗರು ಕನ್ನಡ ಪರ ಇದ್ದರೆ ಎಂಇಎಸ್ ಗೂಂಡಾಗಳು ಜಾತಿ, ಭಾಷೆ ಎತ್ತಿಕಟ್ಟಿ ವಿಷ ಬೀಜ ಬಿತ್ತುವ ಕೆಲಸ ಮಾಡುತ್ತಿರುವುದು ಸಲ್ಲದು ಎಂದು ಹೇಳಿದರು.

ಹಿಂದಿ ಮಾತ್ರ ರಾಷ್ಟ್ರಭಾಷೆಯಲ್ಲ. ಈ ನೆಲದ ಕನ್ನಡ ಕೂಡ ರಾಷ್ಟ್ರಭಾಷೆ. ಈ ನೆಲದಲ್ಲಿ ಇರುವ ಎಲ್ಲಾ ಭಾಷಿಗರು ಕನ್ನಡ ನಾಡು, ನುಡಿಗೆ ಗೌರವ ಕೊಡಲೇ ಬೇಕು. ನಾಡು, ನುಡಿ, ನೆಲ, ಜಲ, ಗಡಿ ರಕ್ಷಣೆಗೆ ಮತ್ತು ಕನ್ನಡಿಗರ ಪರ ಎಂಥದೇ ಹೋರಾಟಕ್ಕೂ ನಾವು ಬದ್ಧರಿದ್ದೇವೆ ಎಂದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಕನ್ನಡ ಪರ ಸಂಘಟನೆಗಳು ಕೇವಲ ನಾಡು, ನುಡಿ, ನೆಲ, ಜಲದ ರಕ್ಷಣೆ ಮಾಡುವುದು ಮಾತ್ರವಲ್ಲದೇ, ನೊಂದವರ, ಶೋಷಿತರ, ದಮನಿತರ ಪರ ಹೋರಾಟ ಮಾಡಿ, ಅವರಿಗೆ ಸಾಮಾಜಿಕ ನ್ಯಾಯ ಕೊಡಿಸುವಲ್ಲಿ ಮುಂದಾಗಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಕನ್ನಡ ಭಾಷೆ ಆಂಗ್ಲಮಯವಾಗುತ್ತಿದ್ದು, ಮಮ್ಮಿ, ಡ್ಯಾಡಿ ಸಂಸ್ಕೃತಿಗೆ ಒಗ್ಗಿಕೊಳ್ಳುತ್ತಿದ್ದೇವೆ. ಕನ್ನಡತನ ಮರೆಯಾಗುತ್ತಿದೆ. 'ಅಪ್ಪ-ಅವ್ವ' ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಕನ್ನಡ ಭಾಷಾ ಬೆಳವಣಿಗೆಗೆ ಮುಂದಾಗಬೇಕೆಂದು ಕರೆ ನೀಡಿದರು.

ಹದಡಿ ಶ್ರೀ ವಿದ್ಯಾರಣ್ಯ ಯೋಗೀಶ್ವರರ ಮಠದ ಶ್ರೀ ಸದ್ಗುರು ಮುರುಳೀಧರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಶಾಸಕ ಎಸ್. ರಾಮಪ್ಪ, ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ಸ್ಥಾಯಿ ಸಮಿತಿ ಅಧ್ಯಕ್ಷೆ ಆಶಾ ಉಮಾಶಂಕರ್, ಹರಿಹರದ ರೇವಣಸಿದ್ಧಪ್ಪ, ವಕೀಲ ಕುಡುಪಲಿ ನಾಗರಾಜ್, ಮಿಮಿಕ್ರಿ ಗೋಪಿ, ಚಂದನವನದ ಸಹ ನಿರ್ದೇಶಕ ಚಂದ್ರು ಸರ್ಕಾರ್, ನಿವೃತ್ತ ಅಭಿಯೋಜಕ ಎಸ್.ವಿ.ಪಾಟೀಲ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಕನ್ನಡ ಚಳವಳಿ ಹೋರಾಟಗಾರ ಟಿ. ಶಿವಕುಮಾರ್, ವಿನಯ್ ಜೋಗಪ್ಪನವರ್, ಹಾಲುಮತ ಸಮಾಜದ ಮುಖಂಡ ಸಿದ್ಧಲಿಂಗಪ್ಪ, ಚಂದ್ರು ದೀಟೂರು, ಮಧುಮೈಲಿ, ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಜಮ್ನಳ್ಳಿ ನಾಗರಾಜ್, ಇತರೆ ಪದಾಧಿಕಾರಿಗಳಾದ ಸೈಯದ್ ನಜೀರ್, ಎಂ. ಲೋಕೇಶ್, ಶಿವರಾಜ ಗೌಡ್ರು, ಚಿದಾನಂದ ಸವದತ್ತಿ, ಸೋಮಶೇಖರ್, ರಮೇಶ್, ಪ್ರೀತಮ್ ಗೌಡ, ಸೈಯದ್ ಸಮೀರ್,ಸಿ.ಎನ್. ಮಂಜುನಾಥ್, ದಾನೇಶ್, ಚಂದ್ರು ಮತ್ತಿತರರು ಭಾಗವಹಿಸಿದ್ದರು.

# ಮುಸ್ಸಂಜೆ ಹೊತ್ತಲ್ಲಿ ಹರಿದು ಬಂದ ಗಾನ ಸುಧೆ

## 'ಸ್ವರಾಂಜಲಿ'ಯ ಸ್ವರ ಲೋಕದಲ್ಲಿ ಮಿಂದೆದ್ದ ದೇವನಗರಿ ಸಂಗೀತಾಸಕ್ತರು





ದಾವಣಗೆರೆ, ಡಿ. 15- 'ತೊರೆದು ಜೀವಿಸ ಬಹುದೇ ಹರಿನಿನ್ನ ಚರಣಗಳ...' ಎನ್ನುತ್ತಿದ್ದಾಗ ನೆರೆದಿದ್ದ ಶ್ರೋತೃಗಳು ಭಕ್ತಿ ಪರವಶವಾದರು. 'ಆದಿಕೇಶವರಾಯ...' ಎಂಬ ಏರುಗತಿಗೆ ಪ್ರೇಕ್ಷಕರು ಧನ್ಯರಾದರು.

ಹೌದು, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಖ್ಯಾತ ಹಿಂದೂಸ್ಥಾನಿ ಗಾಯಕ ಪಂಡಿತ್ ವೆಂಕಟೇಶ್ ಕುಮಾರ್ ಅವರ ಗಾನ ಸುಧೆಗೆ ಕೇಳುಗರು ಅಕ್ಷರಶಃ ತಲೆದೂಗಿದರು.

ಪ್ರತಿಮಾ ಸಭಾ, ದಾವಣಗೆರೆ ಮತ್ತು ಸ್ವರಮಯಿ, ಪುಣೆ ಸಹಯೋಗದಲ್ಲಿ ನಗರದ ಬಾಪೂಜಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ಸಾಂಸ್ಕೃತಿಕ ಚೇತನ-ಜಾನಪದ ತಜ್ಞ ಡಾ.ಎಂ.ಜಿ. ಈಶ್ವರಪ್ಪ ಹಾಗೂ ಸ್ವರಯೋಗಿನಿ ಡಾ.ಪ್ರಭಾ ಅತ್ರೆ ಸ್ಮರಣಾರ್ಥ ಸ್ವರಾಂಜಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಆಗಸದಲ್ಲಿ ನೇಸರ ಮರೆಯಾಗುತ್ತಲೇ ಚುಮು ಚುಮು ಚಳಿ ಆರಂಭವಾಗಿತ್ತು. ಆದರೆ ಸ್ವರಾಂಜಲಿ ನಡೆಯುತ್ತಿದ್ದ ಸಭಾಂಗಣದಲ್ಲಿ ಸಂಗೀತ ಅಲೆ ಅಲೆಯಾಗಿ ಹರಿಯುವಂತಿತ್ತು.

ಆರಂಭದಲ್ಲಿ ದುರ್ಗಾ ರಾಗದಿಂದ ಶಾಸ್ತ್ರೀಯ ಸಂಗೀತದ ರಸದೌತಣ ಉಣಬಡಿಸಿದ ವೆಂಕಟೇಶ ಕುಮಾರ್ ಅವರು, 'ಅಕ್ಕಾ ಕೇಳವ್ವಾ ನಾ ಕನಸೊಂದ ಕಂಡೆ, ಅಕ್ಕಿ ಅಡಿಕೆ ಎಲೆ ತೆಂಗಿನಕಾಯಿ' ಎಂದು ಅಕ್ಕಮಹಾದೇವಿ ವಚನಗಳನ್ನು ಹಾಡಿದರು.

ಶ್ರೋತೃಗಳ ಒತ್ತಾಯದ ಮೇರೆಗೆ 'ತೊರೆದು ಜೀವಿಸ ಬಹುದೇ ಹರಿನಿನ್ನ ಚರಣಗಳ...' ಹೇಳಿ ದಾಸಭಕ್ತಿಯನ್ನೇ ಉಕ್ಕೇರಿಸಿದರು. ಕರತಾಡನದ ಅಲೆಯೂ ಉಕ್ಕಿ ಬಂತು. ಕೊನೆಯಲ್ಲಿ ಭೈರವಿ ರಾಗದಲ್ಲಿ ಶರಣ ಸಕಲೋದ್ಧಾರಕ ಜಾನಕೀ ರಮಣ ಎಂದು ಹಾಡುತ್ತಾ ತೆರೆ ಎಳೆದರು.

ಇದಕ್ಕೂ ಮುನ್ನ ಆರಂಭದಲ್ಲಿ ಜಾನಪದ ತಜ್ಞ ಡಾ.ಎಂ.ಜಿ. ಈಶ್ವರಪ್ಪ ಪ್ರೊ.ಬಸಮ್ಮನವರ ಸುಪುತ್ರ ಪೃಥುವೈನ್ಯ ಸಹ ಎಲ್ಲರೂ ಹುಬ್ಬೇರಿಸುವಂತೆ ಗಾನ ಸುಧೆ ಹರಿಸಿದರು. ಡಾ.ಪ್ರಭಾ ಅತ್ರೆ ಅವರ ಶಿಷ್ಯರೂ, ರಾಜಸ್ಥಾನ ಸಂಗೀತ ನಾಟಕ ಅಕಾಡೆಮಿ ಪುರಸ್ಕೃತರೂ ಆದ ಡಾ.ಚೇತನಾ ಪಾಠಕ್ ಸಹ ಸಂಗೀತ ರಸದೌತಣ ಉಣ ಬಡಿಸಿದರು.

ಕೇಶವ ಜೋಷಿ, ಸಂತೋಷ್ ಹೂಗಾರ, ಗುರುಪ್ರಸಾದ ಹೆಗಡೆ, ಶ್ರೀಶೈಲ ಬಿರಾದಾರ ಅವರುಗಳು ಹಾರ್ಮೋನಿಯಂ, ತಬಲ ಸಾಥ್ ನೀಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪಂ.ವೆಂಕಟೇಶ್ ಕುಮಾರ್, 14-15 ವರ್ಷದವನಿದ್ದಾಗಿನಿಂದಲೂ ದಾವಣಗೆರೆ ಸಂಪರ್ಕದಲ್ಲಿದ್ದೇನೆ. ಇದು ಸಂಸ್ಕೃತಿ, ಸಭ್ಯತೆ, ದಾನಿಗಳಿಗೆ ನಂಬರ್ ಒಂದನೇ ಸ್ಥಾನದ ಊರು. ಇಲ್ಲಿ ಪ್ರಾಮಾಣಿಕರು, ನಿಸ್ವಾರ್ಥರು ಸೇವೆ ಮಾಡುತ್ತಿದ್ದಾರೆ ಎಂದರು.

ಪಂಚಾಕ್ಷರಿ ಗವಾಯಿಗಳು, ಪುಟ್ಟರಾಜ ಗವಾಯಿಗಳ ಮೇಲೆ ಹೆಚ್ಚು ಭಕ್ತಿ ಇರುವ ಈ ಊರಿನಲ್ಲಿ ಹಿಂದೂಸ್ತಾನಿ ವಾದನ, ಗಾಯನ ಕಾರ್ಯಕ್ರಮಗಳು ಇನ್ನಷ್ಟು ಹೆಚ್ಚಾಗಿ ನಡೆಯಲಿ ಎಂದು ಆಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರತಿಮಾ ಸಭಾದ ಗೌರವಾಧ್ಯಕ್ಷ ಪ್ರೊ.ಎಸ್. ಹಾಲಪ್ಪ, ಭೀಮಸೇನ ಜೋಷಿ ಅವರ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ವೆಂಕಟೇಶ್ ಕುಮಾರ್ ಅವರ ಮೇಲಿದೆ. ಅವರು ಇಂದಿನ ಕಾರ್ಯಕ್ರಮಕ್ಕೆ ಆಗಮಿಸಿರುವುದು ನಮ್ಮೆಲ್ಲರ ಸೌಭಾಗ್ಯ ಎಂದರು.

ಅಧ್ಯಕ್ಷ ಬಾ.ಮ. ಬಸವರಾಜಯ್ಯ ಪ್ರತಿಮಾ ಸಭಾ ನಡೆದು ಬಂದ ಹಾದಿ ಬಗ್ಗೆ ವಿವರಿಸಿದರು. ಸಂಗೀತ, ನಾಟಕ, ಸಾಹಿತ್ಯ, ಭಾಷೆಯ ಕುರಿತಂತೆ ಪ್ರತಿ ವರ್ಷ ಆರು ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶ ಹೊಂದಿರುವುದಾಗಿ ಹೇಳಿದರು.

ಕೋಶಾಧ್ಯಕ್ಷ ಸಂಪನ್ನ ಮುತಾಲಿಕ್ ಸ್ವಾಗತಿಸಿದರು. ದಿ.ಎಂ.ಜಿ. ಈಶ್ವರಪ್ಪ ಅವರ ಪತ್ನಿ ಪ್ರೊ.ಬಸಮ್ಮ, ಸಭಾದ ಪ್ರಧಾನ ಕಾರ್ಯದರ್ಶಿ ಬಿ.ಎನ್. ಮಲ್ಲೇಶ್ ಉಪಸ್ಥಿತರಿದ್ದರು.

ಆರಂಭದಲ್ಲಿ ದಿ.ಎಂ.ಜಿ. ಈಶ್ವರಪ್ಪ ಹಾಗೂ ಡಾ.ಪ್ರಭಾ ಅತ್ರೆ ಅವರ ಅವರ ಕಿರು ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಈಶ್ವರಪ್ಪ ಅವರ ಸಾಕ್ಷ್ಯಚಿತ್ರಕ್ಕೆ ಕಲಾವಿದ ಆರ್.ಟಿ. ಅರುಣ್ ಕುಮಾರ್ ಅವರ ಪರಿಕಲ್ಪನೆ, ಸಂಕಲನ, ನಾಗರಾಜ ಸಿರಿಗೆರೆ ಸಾಹಿತ್ಯ, ಉಮಾಶಂಕರ್ ಕುರುಡಿ ಅವರ ಛಾಯಾಗ್ರಹಣ ವಿತ್ತು. ಡಾ.ಶೃತಿರಾಜ್ ಹಿನ್ನೆಲೆ ಧ್ವನಿ ನೀಡಿದ್ದರು.

# ಏಕ ಚುನಾವಣೆ ಮಸೂದೆ ಮಂಡನೆ ಮುಂದೂಡಿಕೆ

ನವದೆಹಲಿ, ಡಿ. 15- ಲೋಕಸಭೆಯಲ್ಲಿ ಹಣಕಾಸು ಮಸೂದೆಗಳ ವಿಷಯ ಪೂರ್ಣಗೊಳ್ಳುವವರೆಗೆ ಏಕ ಚುನಾವಣೆ ಮಸೂದೆಯನ್ನು ಮಂಡಿಸದಿರಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಏಕಕಾಲಕ್ಕೆ ಚುನಾವಣೆ ನಡೆಸಲು ಸಂವಿಧಾನಕ್ಕೆ ತಿದ್ದುಪಡಿ ತರುವ ಮಸೂದೆ ಹಾಗೂ ಕೇಂದ್ರಾಡಳಿತ ಕಾಯ್ದೆಗಳ ತಿದ್ದುಪಡಿ ಮಸೂದೆಗಳನ್ನು ಸೋಮವಾರ ಮಂಡಿಸಲು ಕೇಂದ್ರ ಸರ್ಕಾರ ಈ ಹಿಂದೆ ನಿರ್ಧರಿಸಿತ್ತು.

ಆದರೆ ಸೋಮವಾರ ಹಣಕಾಸು ಸಂಬಂಧಿತ ಪೂರಕ ಬೇಡಿಕೆಗಳ ವಿಷಯವನ್ನು ಮಂಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಸೋಮವಾರದ ಕಲಾಪಗಳ ಪಟ್ಟಿಯನ್ನು ಲೋಕಸಭಾ ಕಾರ್ಯಾಲಯ ಪ್ರಕಟಿಸಿದ್ದು, ಅದರಲ್ಲಿ ಏಕಕಾಲದ ಚುನಾವಣೆಯ ಮಸೂದೆಗಳು ಇಲ್ಲ.

ಆದರೆ ಹಣಕಾಸು ವಿಷಯಗಳು ಪೂರ್ಣಗೊಂಡ ನಂತರ ಕೊನೆಯ ಕ್ಷಣದಲ್ಲಿ ಮಸೂದೆ ಮಂಡಿಸಲು ಸರ್ಕಾರಕ್ಕೆ ಅವಕಾಶ ಇದೆ.

ಏಕಕಾಲಕ್ಕೆ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳ ಚುನಾವಣೆ ನಡೆಸುವ ಎರಡು ಮಸೂದೆಗಳನ್ನು ಕೇಂದ್ರ ಸರ್ಕಾರ ರೂಪಿಸಿದ್ದು, ಇವುಗಳನ್ನು ಸದಸ್ಯರಿಗೆ ಹಂಚಲಾಗಿದೆ. ಚಳಿಗಾಲದ ಅಧಿವೇಶನ ಡಿಸೆಂಬರ್ 20ಕ್ಕೆ ಪೂರ್ಣಗೊಳ್ಳಲಿದೆ.

## ಅಕ್ಕಮಹಾದೇವಿ ಸಮಾಜದಲ್ಲಿ ಇಂದು ಹುಣ್ಣಿಮೆ ಕಾರ್ಯಕ್ರಮ



ದಾವಣಗೆರೆಯ ಶ್ರೀ ಅಕ್ಕಮಹಾದೇವಿ ಸಮಾಜದ ವತಿಯಿಂದ ಇಂದು ಸಂಜೆ 5.30ಕ್ಕೆ ಹೊಸ್ತಿಲ ಹುಣ್ಣಿಮೆ ಕಾರ್ಯಕ್ರಮ ನಡೆಯಲಿದೆ.

ಅಕ್ಕಮಹಾದೇವಿ ಸಮಾಜದ ಅಧ್ಯಕ್ಷರಾದ ಶ್ರೀಮತಿ ಕಂಚಿಕೇರಿ ಸುಶೀಲಮ್ಮ ಅಧ್ಯಕ್ಷತೆ ವಹಿಸಲಿದ್ದು, ಶ್ರೀಮತಿ ಜ್ಯೋತ್ಸ್ನ ಶ್ರೀಕಂಠ ಅವರು ಅಹಲ್ಯಬಾಯಿ ಹೋಳ್ಕರ್ ಬಗ್ಗೆ ಮಾತನಾಡಲಿರುವರು.

ಶ್ರೀಮತಿ ಆಶಾ ಚಿತ್ರಿಕಿ ರಸಪ್ರಶ್ನೆ ನಡೆಸಿಕೊಡುವರು. ಉಪಾಧ್ಯಕ್ಷರಾದ ಶ್ರೀಮತಿ ನೀಲಗುಂದ ಜಯಮ್ಮನವರಿಂದ ಚಿಂತನ - ಮಂಥನ, ಕಾರ್ಯದರ್ಶಿ ಶ್ರೀಮತಿ ದೊಗ್ಗಳ್ಳಿ ಸುವರ್ಣಮ್ಮ ಉಪಸ್ಥಿತರಿರುವರು ಎಂದು ಇಂದಿನ ಹೊಸ್ತಿಲ ಹುಣ್ಣಿಮೆ ಸಂಚಾಲಕರಾದ ಶ್ರೀಮತಿ ಶಾಂತ ಮೆಡ್ಲೇರಿ, ಶ್ರೀಮತಿ ವೀಣಾ ಕಾಯಿ ಅವರುಗಳು ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂಡಸ್ಟ್ರಿಯಲ್ ಏರಿಯಾ ಲೋಕಿಕೆರೆ ರಸ್ತೆ, ಸುಬ್ರಹ್ಮಣ್ಯ ನಗರ, ಎಸ್.ಎ. ರವೀಂದ್ರನಾಥ ಬಡಾವಣೆ ಮತ್ತು ಸುತ್ತ ಮುತ್ತ ಪ್ರದೇಶಗಳಲ್ಲಿ, ಎಸ್.ಓ.ಜಿ ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ಧ, ಬಸವ ಭೀಮ ನಗರ, ಕರ್ನಾಟಕ ಬೀಜ ನಿಗಮ, ಎಸ್.ಎಸ್ ಹೈ-ಟೆಕ್ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ದೊಡ್ಡಬಾತಿಯಲ್ಲಿ ಇಂದು ರೇವಣ ಸಿದ್ದೇಶ್ವರ ಕಾರ್ತಿಕ



ದಾವಣಗೆರೆ ತಾಲ್ಲೂಕು ದೊಡ್ಡ ಬಾತಿ ಗ್ರಾಮದಲ್ಲಿ ಇಂದು ಸಂಜೆ ಶ್ರೀ ರೇವಣ ಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಜರುಗಲಿದೆ.

## ನಗರದಲ್ಲಿ ಇಂದು ದಾನಮ್ಮ ದೇವಿ ಕಾರ್ತಿಕೋತ್ಸವ



ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇ ಶ್ವರ ಮತ್ತು ಗುಡ್ಡಾಪುರದ ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಶ್ರೀ ಬಸವೇಶ್ವರ ಹಾಗೂ ಶ್ರೀ ದಾನಮ್ಮ ದೇವಿ ಕಡೇ ಕಾರ್ತಿಕೋತ್ಸವವು ಇಂದು ಸಂಜೆ 7.30ಕ್ಕೆ ನಡೆಯಲಿದೆ.

## ಸ್ವದೇಶಿ ಮೇಳಕ್ಕೆ ಮೆರಗು ತಂದ ಚಿರಂತನದ ಜಾನಪದ ತಂಡ




ದಾವಣಗೆರೆ, ಡಿ.15- ನಗರದಲ್ಲಿ ನಡೆಯುತ್ತಿರುವ ಸ್ವದೇಶಿ ಮೇಳದಲ್ಲಿ 'ಚಿರಂತನ ಅಕಾಡೆಮಿ' ವಿದ್ಯಾರ್ಥಿನಿಯರು ಜಾನಪದ ಸಮಕಾಲೀನ ಹಾಗೂ ಫ್ಯೂಷನ್ ನೃತ್ಯಗಳನ್ನು ಪ್ರದರ್ಶಿಸಿದರು. ವಿಭಿನ್ನ ರೀತಿಯ ಪ್ರಸ್ತುತಿಗಳನ್ನೊಳಗೊಂಡ ಈ ನೃತ್ಯಗಳ ಪ್ರದರ್ಶನಕ್ಕೆ ಪ್ರೇಕ್ಷಕರಿಂದ ಮೆಚ್ಚುಗೆ ವ್ಯಕ್ತವಾಯಿತು.

ನೃತ್ಯದಲ್ಲಿ ಸಿರಿ ಪದ್ಮಿನಿ, ವೈಷ್ಣವಿ ಎನ್, ವೈಷ್ಣವಿ ಆರ್ ಎಂ, ತನುಜಾ, ಆರ್ನವಿ, ಸಮೀಕ್ಷಾ, ಖುಷಿ ಎಂ ಎ, ಸಂಸ್ಕೃತಿ, ಆರ್ನ, ಅದಿತಿ, ಗಮ್ಯಶ್ರೀ, ಜೋತ್ಸ್ನಾಪ್ರಿಯ, ವಿನಂತಿ, ಮೈತ್ರಿ, ಅಕ್ಷತಾ, ತನುಶ್ರೀ, ಚಾರ್ವಿ, ತೇಜಶ್ರೀ, ಸೃಷ್ಟಿ ಪಾಟೀಲ್, ಮೋಕ್ಷಗಂಗ, ಖುಷಿ, ಶ್ರೇಯ, ಸಾನ್ವಿ, ಶಾಲಿನಿ, ಆದ್ಯ ಸೇರಿದಂತೆ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಮತಗಳಿಂದ ನ್ಯಾಯಮೂರ್ತಿಗಳ ಆಯ್ಕೆ

**ದಕ್ಷಿಣ ಅಮೇರಿಕಾ ದೇಶಗಳಿಗೆ ಹೊಸ ದಾರಿ ತೋರಿಸಿರುವ ಬೊಲಿವಿಯ**

ಲಾ ಪ್ಯಾಜ್, ಡಿ. 15- ವಿಶ್ವದಾದ್ಯಂತ ಅರ್ಹತೆಯನ್ನು ಆಧರಿಸಿ ನ್ಯಾಯಾಧೀಶರ ನೇಮಕ ಮಾಡಲಾಗುತ್ತದೆ. ಆದರೆ ದಕ್ಷಿಣ ಅಮೆರಿಕದ ಬೊಲಿವಿಯ ಚುನಾವಣೆಯ ಮೂಲಕ ಸರ್ವೋನ್ನತ ನ್ಯಾಯಾಲಯದ ನ್ಯಾಯಮೂರ್ತಿಗಳ ಆಯ್ಕೆಗೆ ಮುಂದಾಗಿದೆ. ಭಾನುವಾರ ಈ ಚುನಾವಣೆ ನಡೆದಿದ್ದು, ಇದರ ಪರಿಣಾಮ ದಕ್ಷಿಣ ಅಮೇರಿಕಾದ ಇತರೆ ದೇಶಗಳ ಮೇಲೂ ಬೀರಬಹುದಾಗಿದೆ.

ನ್ಯಾಯಮೂರ್ತಿಗಳ ಆಯ್ಕೆಗೆ ನಡೆದಿರುವ ಚುನಾವಣೆಯಲ್ಲಿ ಪ್ರಚಾರ ಮಾಡುವಂತಿಲ್ಲ ಎಂಬ ಕಟ್ಟಳೆ ವಿಧಿಸಲಾಗಿದೆ. ಆದರೆ ಎಲ್ಲಾ ಚುನಾವಣೆಗಳ ರೀತಿಯಲ್ಲೇ ಈ ಚುನಾವಣೆಯಲ್ಲೂ ಅಭ್ಯರ್ಥಿಗಳು ಹಲವು ಒಳದಾರಿಗಳನ್ನು ಕಂಡುಕೊಂಡಿದ್ದಾರೆ.

ಕೆಲ ಅಭ್ಯರ್ಥಿಗಳು ತಿಂಡಿ ಪಟ್ಟಣಗಳ ಮೇಲೆ ತಮ್ಮ ಚಿತ್ರಗಳನ್ನು ಪ್ರಕಟಿಸಿದ್ದಾರೆ. ಇನ್ನು ಕೆಲವರು ಮತದಾನ ಕುರಿತ ಮಾಹಿತಿ ನೀಡುವ ಪತ್ರಗಳಲ್ಲಿ ಪರೋಕ್ಷವಾಗಿ ತಮ್ಮ ಘೋಷಣೆ ಸೇರ್ಪಡೆ ಮಾಡಿದ್ದಾರೆ.

ನ್ಯಾಯಿಕ ಹುದ್ದೆಗಳಿಗೆ ಚುನಾವಣೆ ನಡೆಸುತ್ತಿರುವ ಏಕೈಕ ದೇಶ ಬೊಲಿವಿಯ. ಶೀಘ್ರದಲ್ಲೇ ಮೆಕ್ಸಿಕೋ ಸಹ ಇದೇ ಪದ್ಧತಿ ಅಳವಡಿಸಿಕೊಳ್ಳಲಿದೆ. ಅದರ ಮಾಜಿ ಅಧ್ಯಕ್ಷ ಅಡ್ರೆಸ್ ಲೋಪೇಸ್ ಅವರು ತೀವ್ರ ವಿರೋಧದ ನಡುವೆಯೂ ಚುನಾವಣಾ ಪದ್ಧತಿ ಜಾರಿಗೆ ತಂದಿದ್ದರು.

2009ರಲ್ಲಿ ಬೊಲಿವಿಯ ಅಧ್ಯಕ್ಷರಾಗಿದ್ದ ಎವೋ ಮೊರಲೆಸ್ ಅವರು ನ್ಯಾಯಾಂಗದಲ್ಲಿ ಪರಿವರ್ತನೆ ತರುವಾಗ ಚುನಾವಣಾ ವ್ಯವಸ್ಥೆ ಸೇರ್ಪಡೆ ಮಾಡಿದ್ದರು. ದೇಶದ ಉನ್ನತ ಹಂತದಲ್ಲಿ ಇರುವ ಭ್ರಷ್ಟಾಚಾರ ನಿವಾರಣೆ ಹಾಗೂ ಪ್ರಜಾಪ್ರಭುತ್ವಕ್ಕೆ ಉತ್ತೇಜನ ನೀಡಲು ಈ ಕ್ರಮ ಸಹಕಾರಿ ಎಂದು ಹೇಳಲಾಗಿತ್ತು. ನಂತರ ನಡೆಯುತ್ತಿರುವ ಮೂರನೇ ಚುನಾವಣೆ ಇದಾಗಿದೆ.

ಆದರೆ ಚುನಾವಣೆಗೆ ಮುಂದಾಗಿರುವುದು ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ನ್ಯಾಯಾಲಯಗಳು ತಟಸ್ಥವಾಗಿರುವ ಬದಲು ರಾಜಕೀಯ ಪ್ರಭಾವಕ್ಕೆ ಒಳಗಾಗುತ್ತಿವೆ ಎಂದು ಮತದಾರರು ಹೇಳುತ್ತಿದ್ದಾರೆ.

ಬೊಲಿವಿಯಾದಲ್ಲಿ ದಶಕಗಳಿಂದ ನ್ಯಾಯಾಧೀಶರನ್ನು ಅವರ ಅರ್ಹತೆ ಹಾಗೂ ತರಬೇತಿ ಮೂಲಕ ನೇಮಿಸಲಾಗುತ್ತಿತ್ತು. ಈಗ ಚುನಾವಣಾ ಪದ್ಧತಿಗೆ ಬಂದಿರುವುದಕ್ಕೆ ಜನರಲ್ಲಿ ಹೆಚ್ಚಿನ ಉತ್ಸಾಹವೇನೂ ಕಂಡುಬಂದಿಲ್ಲ.

ಚುನಾವಣೆ ಮೂಲಕ ನ್ಯಾಯಾಧೀಶರನ್ನು ನೇಮಕ ಮಾಡಲು ಮುಂದಾದರೆ ನ್ಯಾಯಾಂಗದಲ್ಲಿ ಆಡಳಿತಾರೂಢ ಪಕ್ಷದ ಪ್ರಾಬಲ್ಯ ಹೆಚ್ಚಾಗುತ್ತದೆ. ಇದರಿಂದ ಅಧಿಕಾರದಲ್ಲಿ ಸಮತೋಲನ ಇರುವುದಿಲ್ಲ ಎಂಬ ಚಿಂತನೆ ವಿಶ್ವದಾದ್ಯಂತ ಇದೆ. ಲ್ಯಾಟಿನ್ ಅಮೆರಿಕಾದ ಎಲ್ ಸೆಲ್ವೇಡಾರ್ ಹಾಗೂ ಹೊಂಡಾರಸ್ ಮುಂತಾದ ದೇಶಗಳಲ್ಲಿ ನ್ಯಾಯಾಂಗವನ್ನು ರಾಜಕೀಯಗೊಳಿಸಿದ್ದು ಅಡ್ಡ ಪರಿಣಾಮವನ್ನೇ ತಂದಿದೆ. ಬೊಲಿವಿಯ ನ್ಯಾಯಾಧೀಶರನ್ನು ಚುನಾವಣೆ ಮೂಲಕ ನೇಮಿಸಲು ಮುಂದಾಗಿರುವುದಕ್ಕೆ ನ್ಯಾಯಾಂಗದ ಉನ್ನತ ಅಧಿಕಾರಿಗಳಲ್ಲೇ ಹೆಚ್ಚಿನ ಉತ್ಸಾಹ ಇಲ್ಲ.

ಚುನಾವಣಾ ಪ್ರಕ್ರಿಯೆ ಶಾಂತ ಹಾಗೂ ಸರಳವಾಗಿ ನಡೆಯಬೇಕಿತ್ತು. ಆದರೆ ಚುನಾವಣೆ ವಿವಾದಾತ್ಮಕ ಹಾಗೂ ತಗಾದೆಗಳಿಂದ ಕೂಡಿದೆ ಎಂದು ಬೊಲಿವಿಯ ಚುನಾವಣಾ ಟ್ರಿಬ್ಯುನಲ್ ಉಪಾಧ್ಯಕ್ಷ ಫ್ರಾನ್ಸಿಸ್ಕೋ ವರ್ಗಸ್ ಹೇಳಿದ್ದಾರೆ.

2023ರಲ್ಲಿ ಚುನಾವಣೆ ನಡೆಯಬೇಕಿತ್ತು. ಆದರೆ ಅಧ್ಯಕ್ಷ ಲೂಯಿಸ್ ಆರ್ಕೆ ಬೆಂಬಲಿಗರನ್ನೇ ಹೊಂದಿರುವ ಸಂವಿಧಾನಿಕ ನ್ಯಾಯಾಲಯ ಚುನಾವಣೆಯನ್ನು ಮುಂದೂಡಿತ್ತು. ಇದರಿಂದಾಗಿ ಸಂಘರ್ಷ ಮತ್ತಷ್ಟು ತೀವ್ರವಾಗಿದೆ.

ಸಂವಿಧಾನಿಕ ನ್ಯಾಯಾಲಯಕ್ಕೆ ಆಯ್ಕೆಯಾಗುವವರು ಮುಂದಿನ ದಿನಗಳಲ್ಲಿ ರಾಜಕೀಯ ಭವಿಷ್ಯದ ಮೇಲೆ ಪರಿಣಾಮ ಬೀರಲಿದ್ದಾರೆ. ಹೀಗಾಗಿ ರಾಜಕೀಯ ಪಕ್ಷಗಳು ಈ ಚುನಾವಣೆ ಮೇಲೆ ಗಂಭೀರವಾಗಿ ಗಮನಹರಿಸಿವೆ.

ಪ್ರಸಕ್ತ ಸಂವಿಧಾನಿಕ ನ್ಯಾಯಾಲಯದಲ್ಲಿ 9 ಸದಸ್ಯರಿದ್ದು, ಈ ಪೈಕಿ ನಾಲ್ಕು ಸ್ಥಾನಗಳಿಗೆ ಮಾತ್ರ ಚುನಾವಣೆ ನಡೆಯುತ್ತಿದೆ.

## ನಗರದಲ್ಲಿ ಇಂದು ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಸ್ವಾಮಿ ಕಡೇ ಕಾರ್ತಿಕೋತ್ಸವ



ಚೌಕಿಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ಕಡೇ ಕಾರ್ತಿಕೋತ್ಸವದ ಪ್ರಯುಕ್ತ ಇಂದು ಸಂಜೆ 7 ಕ್ಕೆ ಸಣ್ಣ ರಥದಲ್ಲಿ ನಂದಿ ವಾಹನ ಮಹೋತ್ಸವವು ಜರುಗುವುದು.

ನಂತರ ರಾತ್ರಿ 10ಕ್ಕೆ ಸಿಡಿಮದ್ದಿನ ಕಾರ್ಯಕ್ರಮವನ್ನು ದಿ|| ಶ್ರೀ ಮಾಗಾನಹಳ್ಳಿ ಷಣ್ಮುಖಪ್ಪನವರ ಜ್ಞಾಪಕಾರ್ಥ ವಾಗಿ ಇವರ ಕುಟುಂಬದವರು ನಡೆಸಿಕೊಡುವರು. ನಂತರ ಕಾರ್ತಿಕೋತ್ಸವ ಜರುಗುವುದು ಎಂದು ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘದ ಕಾರ್ಯದರ್ಶಿ ಡಾ. ಅಥಣಿ ಎಸ್. ವೀರಣ್ಣ ತಿಳಿಸಿದ್ದಾರೆ.

## ಶ್ಯಾಬನೂರಿನಲ್ಲಿ 21 ರಂದು ಸಾಮೂಹಿಕ ವಿವಾಹ



ದಾವಣಗೆರೆ, ಡಿ.15- ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವದ ಪ್ರಯುಕ್ತ ದಿನಾಂಕ 21ರ ಶನಿವಾರ ಸಾಮೂಹಿಕ ವಿವಾಹವನ್ನು ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಇದೇ ದಿನಾಂಕ 20ರೊಳಗಾಗಿ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : ಮೊ. 91130-42614, 97437-92202, 98442-49100, 98440-78433.

## ನಗರದಲ್ಲಿ ಇಂದು ಗಣಪತಿ ಕಾರ್ತಿಕ

ಮೋತಿ ಟಾಕೀಸ್ ಹಿಂಭಾಗದಲ್ಲಿರುವ ಶ್ರೀ ಮಹಾವಿದ್ಯಾ ಗಣಪತಿ ದೇವಸ್ಥಾನದಲ್ಲಿ ಇಂದು ಸಂಜೆ 6.30ಕ್ಕೆ ಕಡೇ ಕಾರ್ತಿಕೋತ್ಸವ ಜರುಗುವುದು.

## ಹಳ್ಳಿಹಾಲ್‌ನಲ್ಲಿಂದು ಕಾರ್ತಿಕೋತ್ಸವ

ಮಲೇಬೆನ್ನೂರು ಸಮೀಪದ ಹಳ್ಳಿಹಾಳ್ ಗ್ರಾಮದ ಶ್ರೀ ಮುರುಡ ಬಸವೇಶ್ವರ ದೇವರ ಕಾರ್ತಿಕೋತ್ಸವವು ಇಂದು ಸಂಜೆ 7:30 ಕ್ಕೆ ಜರುಗಲಿದೆ ಎಂದು ಗ್ರಾಮದ ಯು.ಎನ್. ಶಿವನಗೌಡ, ಹೆಚ್. ವೀರನಗೌಡ ತಿಳಿಸಿದ್ದಾರೆ.


**ಹತ್ತನೇ ವರ್ಷದ ಪುಣ್ಯಸ್ಮರಣೆ**



ಎಸ್.ಸಿ. ವಿನಯ್
ಜನನ : 20.08.1984 ಮರಣ : 16.12.2014

ನೀ ನಮ್ಮ ಮನ, ಮನೆಯ
ನಂದಾದೀಪ
ಬಾಳು ಬೆಳಗಿದ ಕುಲದೀಪ
ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷ.
ಸದಾ ನಿಮ್ಮ ಸ್ಮರಣೆಯಲ್ಲಿರುವ
ತಂದೆ : ಸಂಸಿ ಚಂದ್ರಶೇಖರ್,
ತಾಯಿ : ಸಂಸಿ ಕಸ್ತೂರಿ
ತಮ್ಮ : ಸಂಸಿ ನಟರಾಜ

ಸಂಸಿ ವಂಶಸ್ಥರು, ದಾವಣಗೆರೆ. ಧಾರವಾಡ ಮುದಕವಿ ವಂಶಸ್ಥರು, ಧಾರವಾಡ
ಮೂಡಿಕುಪ್ಪಸದ ವಂಶಸ್ಥರು, ದಾವಣಗೆರೆ, ಹುಬ್ಬಳ್ಳಿ
ಇಂಡಿಯಾ ನಿವೇಶ್ ಸೆಕ್ಯೂರಿಟೀಸ್ ಪ್ರೈ. ಲಿ., ಬೆಂಗಳೂರು
ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ
ಶ್ರೀ ಗಂಗಾಧರ ಪಾಟೀಲ್ ಅಡ್ವೊಕೇಟ್, ದಾವಣಗೆರೆ
ಆತ್ಮೀಯ ಸ್ನೇಹಿತರಾದ : ಶಿವನಾಗಪ್ಪ, ವಿಜಯಕುಮಾರ್, ಶಿವಶಂಕರ್, ಪ್ರಶಾಂತ್, ಸಿದ್ದು, ಬೆಂಗಳೂರು.



ಶಶಿ ಎಜುಕೇಶನಲ್ ಟ್ರಸ್ಟ್ (ರಿ.)

"ಲಲಿತಾ ಕೇರ್ ಟೇಕಿಂಗ್"

ಲೋಕಿಕೆರೆ ಮುಖ್ಯ ರಸ್ತೆ, ದಾವಣಗೆರೆ - 577 005.



ಸಂಸ್ಥೆಯ ಪರವಾನಗಿ ಸಂಖ್ಯೆ : TRL00517/1512002028/24-25

- ಲಲಿತಾ ಕೇರ್ ಟೇಕಿಂಗ್ ಸಂಸ್ಥೆಯು 40 ವರ್ಷ ಮೇಲ್ಪಟ್ಟ ಕೌಟುಂಬಿಕ ಪುರುಷ / ಮಹಿಳೆಯರು ಖಾಸಗಿ ವೈಯಕ್ತಿಕ ಜೀವನ ನಡೆಸಲು ಬಯಸಿ ಬಂದವರಿಗೆ ಆದ್ಯತೆ.
- ರುಚಿಕರ ಊಟ ಮತ್ತು ಸುಸಜ್ಜಿತ ವಸತಿಯನ್ನು ಕಲ್ಪಿಸಿ ಆರೈಕೆ ಮಾಡಲಾಗುತ್ತದೆ.
- ಆರೈಕೆ ಕೇಂದ್ರದ ಊಟ & ವಸತಿ ಖರ್ಚನ್ನು ಆ ವ್ಯಕ್ತಿಯೇ ಮೂರು ತಿಂಗಳು, ಆರು ತಿಂಗಳು ಅಥವಾ ವಾರ್ಷಿಕ ರೂಪದಲ್ಲಿ ಹಣ ಸಂದಾಯ ಮಾಡಬಹುದು.
- ಆರೈಕೆ ಕೇಂದ್ರಕ್ಕೆ ಪ್ರತಿನಿತ್ಯ ವೈದ್ಯರು ಮತ್ತು ಶುಶ್ರೂಷಕಿಯರು ಭೇಟಿ ನೀಡುತ್ತಾರೆ.
- ಆರೈಕೆ ಕೇಂದ್ರಕ್ಕೆ ಸೇರುವ ಇಚ್ಛೆಯಿದ್ದಲ್ಲಿ ಒಂದು ತಿಂಗಳ ಮುಂಗಡ ಹಣವನ್ನು ಅರ್ಜಿಯೊಂದಿಗೆ ಪಾವತಿಸತಕ್ಕದ್ದಾಗಿರುತ್ತದೆ.
- ಆರೈಕೆ ಕೇಂದ್ರಕ್ಕೆ ಸೇರ ಬಯಸುವವರು ಮೂಲ ದಾಖಲೆಗಳೊಂದಿಗೆ ಕಛೇರಿಗೆ ಭೇಟಿ ನೀಡಿ. 1) ಆಧಾರ್ ಕಾರ್ಡ್ 2) ವಿಳಾಸ ದೃಢೀಕರಣ ಪತ್ರ.

ಸಂಪರ್ಕಿಸಿ : 73494 88957, 99806 29965



ssims SPARSH CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು

ಪ್ರತೀ ಹದಿನೈದು ದಿನಗಳಿಗೊಮ್ಮೆ

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**

D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)

ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 19ನೇ ಡಿಸೆಂಬರ್ 2024 | ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ





**ಇಂದು ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ಕಾರ್ತಿಕ**

ಪದ್ಧತಿ ಪ್ರಕಾರ ದಿನಾಂಕ : 16.12.2024ರ ಸೋಮವಾರ

ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿಯ ಕಡೇ ಕಾರ್ತಿಕೋತ್ಸವ

ನಡೆಯುತ್ತದೆ ಹಾಗೂ ಸಂಜೆ 7 ಗಂಟೆಗೆ ಸಣ್ಣ ರಥದಲ್ಲಿ ಶ್ರೀ ಸ್ವಾಮಿಯ ಮೆರವಣಿಗೆ ನಡೆಯುವುದು.

ನಂತರ ರಾತ್ರಿ 10 ಗಂಟೆಗೆ ದಿ. ಶ್ರೀ ಮಾಗಾನಹಳ್ಳಿ ಷಣ್ಮುಖಪ್ಪ ಅವರ 'ಶ್ರೀ ಶಿವಾನಂದ ಸ್ಟೋರ್ಸ್' ಮಂಡಿಪೇಟೆ, ದಾವಣಗೆರೆ ಇವರಿಂದ 'ಸಿಡಿಮದ್ದಿನ' ಕಾರ್ಯಕ್ರಮ ಏರ್ಪಡಿಸಲಾಗಿದೆ. ನಂತರ ಕಾರ್ತಿಕ ದೀಪೋತ್ಸವವನ್ನು ವಿಜೃಂಭಣೆಯಿಂದ ದೇವಸ್ಥಾನದ ಆವರಣದಲ್ಲಿ ನಡೆಸಲಾಗುವುದು.



ಸರ್ವ ಭಕ್ತಾದಿಗಳು ಸಕಾಲಕ್ಕೆ ಆಗಮಿಸಿ, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘ (ರಿ.) ಹಾಗೂ ರಥೋತ್ಸವ ಕಮಿಟಿ, ಚೌಕಿಪೇಟೆ, ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas